
ಅಪರಂಜಿ



ನಗೆಯ ಕಾರಂಜಿ

- ಆನಂದ್
- ಲೀಲಾಮಿರ್ಲೆ
- ಅಪ್ರಸ್ತುತ
- ಡಾ॥ ಹೆಚ್. ವಿ. ಮೂರ್ತಿ
- ಡಾ॥ ಎಸ್. ಕೃಷ್ಣಮೂರ್ತಿ
- ಡಾ॥ ಪರಡ್ಡಿ ಮಲ್ಲಿಕಾರ್ಜುನ
- ಶಿವು
- ನಂದಕಿಶೋರ

ಸಂಪುಟ–೩
ಸಂಚಿಕೆ–೪
ಜನವರಿ–86

ಬಿಡಿಪ್ರತಿ :
ಕೇವಲ ಒಂದೂವರೆ ರೂಪಾಯಿ

ಅಪರಂಜಿ

ಗೌರವ ಸಲಹೆಗಾರರು :

ಶ್ರೀ ಅ.ರಾ.ಸೇ.
ಶ್ರೀ ಶೇಷಗಿರಿ

ಸಂಪಾದಕರು ಮತ್ತು ಪ್ರಕಾಶಕರು :
ಶ್ರೀ ಶಿವಕುಮಾರ್

ವಾರ್ಷಿಕ ಚಂದಾ ರೂ.15/-
ಬಿಡಿ ಪ್ರತಿ ;—ಒಂದೂವರೆ ರೂಪಾಯಿ

ಹೊಸ ವರುಷ, ಓದುಗರು, ಜಾಹಿರಾತುದಾರರು, ಚಂದಾದಾರರು, ಬರಹಗಾರರು, ಇನ್ನೆಲ್ಲ ಹಿತೈಷಿಗಳಿಗೂ ಹೊಸ ಹರುಷವನ್ನು ತರಲಿ. ಈಚೆಗೆ ನಡೆದ ವಿಶ್ವ ಕನ್ನಡ ಸಮ್ಮೇಳನದಿಂದ ಕನ್ನಡಿಗರಲ್ಲಿ ಕನ್ನಡ ನುಡಿಯ ಮೇಲೆ, ಹೊಸ ಅಭಿಮಾನ ಮೂಡಿಬರಲಿ ಎಂದು ಅಪರಂಜಿ ಮನಸಾರೆ ಪ್ರಾರ್ಥಿಸುತ್ತಾಳೆ

ಶಿವಕುಮಾರ್
ಸಂಪಾದಕ

ಅಪರಂಜಿ ಕಾರ್ಯಾಲಯ
36, 6ನೇ ಮುಖ್ಯ ರಸ್ತೆ
ಮಲ್ಲೇಶ್ವರಂ
ಬೆಂಗಳೂರು–560 003.

ಈ ಸಂಚಿಕೆಯಲ್ಲಿ .. ..

ಮುದ್ರಣ . ಇಂಪ್ರೆಷನ್ಸ್, ಮಲ್ಲೇಶ್ವರಂ ದೂರವಾಣಿ : 362989, 363444



(ತಿಳಿನಗೆಯ ಕಾರಂಜಿ)

ಸಂಪುಟ ೩ | ಜನವರಿ ೮೬ | ಸಂಚಿಕೆ ೪

ಯಾವುದರಿಂದ ಈ ಎಲ್ಲ ಭೂತಗಳೂ ಹುಟ್ಟಿದವೋ, ಯಾವುದರಲ್ಲಿ ಜೀವಿಸಿವೆಯೋ, ಯಾವುದಕ್ಕೆ ಹೋಗಿ ಸೇರುತ್ತವೆಯೋ ಅದು ಬ್ರಹ್ಮ

ತೈತ್ತಿರೀಯ

ವರುಣನ ಬಳಿಗೆ ಅವನ ಮಗನಾದ ಭೃಗುವು ಹೋಗಿ ಭಗವಂತನೆ ಬ್ರಹ್ಮವನ್ನು ತಿಳಿಸು ಎಂದು ಕೇಳಿದಾಗ ವರುಣನು ಹೀಗೆ ಹೇಳಿದನಂತೆ.

ಇಂದು ನಡೆಯುವ ವಿದ್ಯಮಾನಗಳನ್ನು ಪರೀಶೀಲಿಸಿದರೆ ಬ್ರಹ್ಮದ ಜಾಗವನ್ನು ರಾಜಕೀಯ ಆಕ್ರಮಿಸಿದೆಯೇನೋ ಎನ್ನಿಸದೆ ಬಿಡುವುದಿಲ್ಲ.

ವಿಶ್ವ ಕನ್ನಡ ಮೇಳವನ್ನು 'ಅ' ಪಕ್ಷದವರು ಮಾಡುವೆವೆಂದಾಗ 'ಬ' ಗಳು ಬೇಡವೆಂದು ಅಬ್ಬರಿಸಿದರು. ಇಂದು 'ಅ' ಗಳು ಕೂಡದೇ ಕೂಡದು ಎನ್ನುತ್ತಿದ್ದಾರೆ ಬರ, ಬಡತನ, ನಿರುದ್ಯೋಗದ ಪೆಂಡಭೂತಗಳನ್ನು ಹೆಸರಿಸಿ ಕೆಲವರು ಮೇಳ ಬೇಡವೆನ್ನುತ್ತಿದ್ದಾರೆ. ಆದರೆ ಈ ಬರದ ಬೇಸಗೆಯಲ್ಲಿ ಚುನಾವಣೆಗಳ ಅದ್ದೂರಿ ವೆಚ್ಚವನ್ನು ಯಾರೂ ವಿರೋಧಿಸುತ್ತಿಲ್ಲ.

ಸುಧಾರಿತ ತಂತ್ರ ಜ್ಞಾನದಿಂದ ದೇಶವನ್ನು ೨೧ನೆಯ ಶತಮಾನಕ್ಕೆ ಸಾಗಿಸುವ ಮೊದಲೇ ಜನ ದನಗಳು ಅದನ್ನೊಲ್ಲೆವೆಂದು ಪರಲೋಕಕ್ಕೆ ಧಾವಿಸುತ್ತಿದ್ದಾರೆ. ಉದ್ಯೋಗ, ಆಡಳಿತ, ವರ್ಗ, ಗಲಭೆ, ಬಂದ್‌ಗಳೂ ರಾಜಕೀಯದಲ್ಲಿ ಹುಟ್ಟಿ ಬೆಳೆದು ಅಳಿಯುತ್ತಿವೆ.

ಇಂತಹ ಅಲ್ಪತೆಯಿಂದಲೇ ಮಹತ್ತನ್ನು ಸಾಧಿಸುವ ಆಶೆ ನಮ್ಮದು. ನಮ್ಮ ಮಿತ್ರರೂ ಶತ್ರುಗಳೂ ರಾಜಕೀಯಕ್ಕಾಗಿ, ರಾಜಕೀಯದಿಂದಲೇ ಆದವರು.

ಜೀವನ ಆನಂದದಿಂದ ಹುಟ್ಟಿ, ಆನಂದ ಮಯವಾಗಲಿ ಎಂದು ಅಪರಂಜಿ ಹಾರೈಸುತ್ತಾಳೆ.

ಅಪರಂಜಿ ಕಿಡಿ

—ಆನಂದ್

ಜೀನಿವಾದಲ್ಲಿ ರೇಗನ್, ಗೋರ್ಬಚೆವ್ ಮಾತುಕತೆ

—ಸುದ್ದಿ

ರಷ್ಯ-ಶೃಂಗದಿಂದ ಶಾಂತಿಯ ಮಳೆ ಬರುವುದೆಂದು ಆಶಿಸೋಣವೆ?

* * * * *

ನಿಮ್ಮ ಸಮಸ್ಯೆಗಳೇನಾದರೂ ಇದ್ದರೆ ಕುಳಿತು, ಚರ್ಚಿಸಿ, ಪರಿಹರಿಸೋಣ

—ಮರಾಠರಿಗೆ ಹೆಗ್ಗಡೆ ಮನವಿ

ಯಾವ ಭಾಷೆಯಲ್ಲಿ ಚರ್ಚೆ ?

* * * * *

ಬೆಳ್ಳುಳ್ಳಿ ತಿಂದರೆ ಕ್ಯಾನ್ಸರ್ ಬರಲ್ಲವಂತೆ

—ಸುದ್ದಿ

ಕ್ಯಾನ್ಸರ್ ಏಕೆ ಯಾರೂ ಹತ್ತಿರ ಬರುಲ್ಲ !

* * * * *

ಕಡೂರು ಕೋರ್ಟಿನಲ್ಲಿ ವಕೀಲರ ಕಾದಾಟ

—ಸುದ್ದಿ

ಅವರು ನ್ಯಾಯವನ್ನು ತಮ್ಮ ಕೈಗೇ ತೆಗೆದುಕೊಂಡಂತಿದೆ!

* * * * *

5

ನಿಶ್ಯಸ್ತ್ರೀಕರಣ ; ಅಮೆರಿಕ ರಷ್ಯ ಶೃಂಗ ಸಭೆ ಜಿನೀವಾದಲ್ಲಿ

—ಸುದ್ದಿ

ಅವರು ಅಣು–ಸರಿಸುವ ಮಾರ್ಗಗಳಿಂದ ಕ್ಷೇಮವಿಲ್ಲ !

* * * * *

ನಗರವನ್ನು ನಡುಗಿಸಿದ ಚಳಿ

—ದಿನಪತ್ರಿಕೆ

ಹವಾಮಾನ ಇಲಾಖೆ ಪ್ರಕಾರ
ಇನ್ನೂ ಚಳಿಗಾಲ ಆರಂಭವಾಗಿಲ್ಲವಂತೆ !

* * * * *

ಎಂಟನೇ ಶತಮಾನದ ನಾಣ್ಯಗಳ ಪತ್ತೆ

—ಪತ್ರಿಕೆ

ಈಗಲಾದರೂ ನಾಣ್ಯಗಳ ಅಭಾವ ಕಮ್ಮಿಯಾಗಬಹುದು.

* * * *

ಹಂಪೆಯ ಉಗ್ರನರಸಿಂಹನ ಮುರಿದಕೈಗಳನ್ನು ಸಿಮೆಂಟಿನಿಂದ ರಿಪೇರಿ ಮಾಡಲಾಗುತ್ತೆ

—ಸುದ್ದಿ

ನರಸಿಂಹ, ಇನ್ನೂ ಉಗ್ರನಾಗುತ್ತಾನೇನೋ ?

* * * *

ಮುಖಾ ಮುಖಿ—೭

—ಅಪ್ರಸ್ತುತ

ಅಪರಂಜಿ ಶ್ರೀ ಸಾಮಾನ್ಯಳಾದರೂ ಜನನಾಡಿ ಹೇಗೆ ಮಿಡಿಯುತ್ತಿದೆಯೆಂದು ಅರಿಯಲು ಸದಾ ಕುತೂಹಲಾಸಕ್ತಳು.

ಅಪರಂಜಿ ಕಾಡಿನಿಂದ ಬರುತ್ತಿದ್ದಾಗ ಕೆಂಚವ್ವ ಊರಿನಿಂದ ಹಿಂದಿರುಗುತ್ತಿದ್ದಳು.

“ಅಪರಂಜೀ ಅಪರಂಜಿ ಯಾಕೋ ಗ್ರಾಸಾರ ಕೆಟ್ಟೈತೆ ಕೈ ನೋಡಿ ಪ್ರಸ್ನೆ ಹೇಳ್ತಿಯಾ” ಎಂದಳು ಕೆಂಚವ್ವ.

“ಕೆಂಚವ್ವ ಈ ಗ್ರಾಸಾರ ಕಣ್ಣಿನಾಗೆ ಧೂಳಿನ್ಹಂಗೆ ಬಿದ್ದು ಕಾಡತಾ ಐತೆ, ಅದನ್ನೇನು ಪ್ರಸ್ನೆ ಹೇಳಿದು, ಎಂದಳು ಅಪರಂಜಿ. ಕೆಂಚವ್ವ ಬಾಯಿಬಾಯಿ ಬಿಡುವುದನ್ನು ನೋಡಿ.

“ಏನು ಗ್ರಾಸಾರ ಕೆಟ್ಟಿರೋದು ?” ಎಂದಳು.

“ಇವತ್ತು ಸಂತೆ, ಅವರೆ ಕಾಯಿ ಒಯ್ದಿದ್ದೆ. ಎಲ್ಲಾರ ಅವ್ರೆಕಾಯಿ ಮಾರಾಟ ಆತು. ನನ್ನ ಕಾಯಿ ಹೋಗಲಿಲ್ಲ. ಹೋದ ಸಂತೆ ಹುಳ್ಳಿಕಾಳು. ಅದ್ರ ಹಿಂದಿನ ವಾರ ಸಾಸ್ವೆಕಾಳು ಒಯ್ದಿದ್ದೆ. ಅವಕ್ಕೂ ಅದೇ ಗತಿ ಊರಿನಾಗೆ ಮನೆ ಮನೆ ತಿರುಗಿ ಉದ್ರೆಕೊಟ್ಟು ಬಂದಿದ್ದೆ. ಇವತ್ತು ಯಾರೂ ಒಂದು ಪೈಸಾವು ಕೊಡಲಿಲ್ಲ. ಥೂ ನನ್ನ ಹಣೇಬರ ಇಷ್ಟೇ, ದೇವರು ಕಣ್ಣು ತಗೀಲಿಲ್ಲ, ನಾನು ಸುಖ ಪಡಾ ಕಾಲ ಬಂದಿಲ್ಲ ಅಂದ್ಕಂಡು ಬಂದೆ ಈ ಸೀರೆಲ್ಲಾ ಸಿಂದಿ ಸಿಂದಿ ಆಗೆತೆ” ಎಂದಳು ಕೆಂಚವ್ವ “ಯಾಕೆ ಸೊಸೈಟಿಯಲ್ಲಿ ಜನತಾ ಸೀರೆ ಕೊಟ್ರೇ, ಕೊಂಡು ಕೊಳ್ಳೋಕೆ ನಿನಗೆ ದುಡ್ಡು ಸಿಗಲಿಲ್ಲವೇ ?” ಎಂದು ಅಪರಂಜಿ ಕೇಳಿದಳು.

“ಎಲ್ಲೇ ತರ್ತೀ, ಹಾಳು ಸಸೊಟಿ, ಬಾಕ್ಲು ಮುಚ್ಚಿ ಮೂರು ತಿಂಗಳಾತು ?”

"ಹಂಗಾದ್ರೆ ಉಪ್ಪು, ಮೆಣ್ಸಿನಕಾಯಿ ತರಕ್ಕೆ ದುಡ್ಡು ಸಿಗಲಿಲ್ಲಿ ಅಂತ ಒದ್ದಾಡ್ತೀಯಾ ?"

"ದೇವರು ಅದಕ್ಕೆ ಕಡ್ಮೆ ಮಾಡಿಲ್ಲ, ಹತ್ತು ಜನ ಬರಲಿ, ಮುದ್ದೆ ಉದಕ ಹಾಕ್ತಿನಿ"

"ಮತ್ತೆ ಏನು ನಿನಗೆ ಕಡ್ಮೆ ಆದದ್ದು ?"
ಪ್ರಶ್ನೆಯನ್ನು ಕೇಳಿ ಕೆಂಚವ್ವ ನಿಟ್ಟುಸಿರಿಟ್ಟಳು.

"ಇವತ್ತು ಹೊಸ ಸಿಲಿಮಾ ಬಂದೈತೆ ಟೆಂಟ್‌ನಗೆ, ಡ್ಯಾನ್ಸು ಪದ ಪಾಡೈತಂತೆ. ನನ್ನ ಹಣೇ ಬರಕ್ಕೆ ಅದನ್ನ ನೋಡದು ಬರ್‍ಲಿಲ್ಲ." ಎಂದಳು ಕೆಂಚವ್ವ.

"ದೇಶದ ಇತ್ತೀಚಿನ ರಾಜಕೀಯ ವಿದ್ಯಮಾನದ ಬಗ್ಗೆ ನಿನ್ನ ಅಭಿಪ್ರಾಯ ವೇನು ?"

"ನಂಗೆ ಅದೇನು ತಿಳಿಯದಿಲ್ಲ. ಅಲ್ಲವ್ವ ಈ ಎಗ್ಡೆ ಹೆಚ್ಚೋ, ರಾಜೀವ್‌ಗಾಂದಿ ಹೆಚ್ಚೋ ? ಯಾರು ಹೇಳಿದಂಗೆ ಯಾರು ಕೇಳ್ತರೆ ?"

"ಅವಂದು ಡೆಲ್ಲಿ ಒಳ್ಗೆ ಹೆಚ್ಚು, ಇವಂದು ಬೆಂಗಳೂರಿನಗೆ ಹೆಚ್ಚು ?"

"ಹಂಗಾರೆ ಎಗ್ಡೆಗೆ ಪಟ್ಟ ಕಟ್ಟದೋರು ಯಾರು ? ಗಾಂದಿಗೆ ಪಟ್ಟ ಕಟ್ಟಿದೋರು ಯಾರು ?

"ಪಟ್ಟಾನ ಯಾರು ಯಾರಿಗೂ ಕಟ್ಟಿಲ್ಲ ಕೆಂಚಿವ್ವ ಇದು ಪ್ರಜಾ ಪ್ರಭುತ್ವ"

"ಐ, ಅಪ್ರಂಜಿ, ಪಟ್ಟ ಕಟ್ಟಿನೆ ರಾಜ್ಯ ಹೆಂಗೆ ಆಳಕ್ಕೆ ಬರ್ತತೆ ?"

"ಎಲೆಕ್ಸನ್ ಆತಲ್ಲ ಅದ್ರಾಗೆ ಆರ್‍ಸಿ ಬಂದ್ರು"

"ಬಂದ್ಮ್ಯಾಗೆ ಪಟ್ಟ ಕಟ್ಟರು ಒಬ್ರು ಬೇಕಲ್ಲ"

"ಅವರು ಅಧಿಕಾರಕ್ಕೆ ಬಂದ್ರಾಯ್ತು ಕೆಂಚವ್ವ, ಅವ್ರೇನು ಮಹಾರಾಜರಲ್ಲ, ಪಟ್ಟ ಕಟ್ಟಕ್ಕೆ"

"ತಗೀ ಅಪರಂಜಿ ತಮಾಸಿ ಮಾಡಬ್ಯಾಡ, ಈ ವರ್ಸ ಬರ ಬಂತಲ್ಲ, ಈಗ ಯಾರು ಮಳೆ ಬೆಳೆ ನೋಡ್ಕೊಂಬರು ?

"ಅವರೇನು ಮೋಡವೇ, ಮಣ್ಣೇ, ಗೊಬ್ಬರವೇ, ಮಳೆ ಬೆಳೆ ನೋಡ್ಕೊಂಬಕ್ಕ ? ಹೋಗಲಿ ಕೆಂಚ್ಚವ ಈ ನಿಶ್ಯಸ್ತ್ರೀಕರಣದ ಶೃಂಗ ಸಭೆ ನಡೀತಲ್ಲ, ಅದರ ಬಗ್ಗೆ ನಿನ್ನ ಅನಿಸಿಕೆ ಏನು ?"

"ಎಲ್ಲವ್ವ ಅದೇ ನಡ್ದದು, ನಂಗೆ ಗೊತ್ತೇ ಇಲ್ಲ, ನಿಸ್ಸಸ್ತ್ರ ಅಂದ್ರೆ ಏನು ?"

"ಈ ಆಟಂಬಾಂಬ್ ಐತಲ್ಲ ಅದನ್ನ ಇನ್ಮ್ಯಾಲೆ ತಯಾರು ಮಾಡಬಾರ್ದು ಅಂತ ಜಿನೀವಾದಗೆ ನಡೀತು"

"ಹಂಗಾರೆ ದೀವಳ್ಗಿ ಹಬ್ಬ ಮಾಡದು ಹೆಂಗೆ ಆಟಂಬಾಂಬ್ ಇಲ್ಲದ"

"ಕರೆಕ್ಟ್ ಕೆಂಚವ್ವ, ನಿನ್ನ ಮಾತು ಅಂದೆ ಪ್ರಮಾಣ ವಾಕ್ಯ. ಈ ತೆಲುಗು ಗಂಗಾ ಯೋಜನೆ ...."

"ಅಪರಂಜಿ, ನಿನಗಿನ್ನೂ ಸಿಕ್ಕ ವಯಸ್ಸು, ಹಿಂಗೆಲ್ಲಾ ಹುಚ್ಚು ಹುಚ್ಚು ಆಡಬಾರದು. ಈ ಗಾಲೆ ಸೂರ್ಯ ಪಡುವಕ್ಕೆ ವಾಲಿದನೆ. ನೀನು ಮತ್ತೆ ಯಾಕೆ ಊರಿಗೆ ಹೋಗ್ತಿ, ಹೆಂಗಿದ್ರೂ ಸಂತೆ ರಸ್ಸು, ಸಿಲಿಮಾಕೆ ಸೀಟು ಸಿಗಲ್ಲ, ಬಾ ನಮ್ಮನಿಗೆ ಹೋಗಿ ಮುದ್ದೆ ಉದ್ಕ ಉಂಡು, ನನಗೆ ಪ್ರಸ್ಮೆ ಹೇಳಿ ನಿಮ್ಮ ಮನೆಗೆ ಹೋಗ್ವೆಂತೆ"

ಅಪರಂಜಿ ಹೇಳಿದಳು "ಕೆಂಚವ್ವ, ನಿನಗೆ ಏನೇನೂ ಗ್ರಾಸಾರ ಕಾಡಿಲ್ಲ, ದಿನಾ ಹನುಮಪ್ಪನ ಗುಡಿಗೆ ಹೋಗಿ ಪ್ರದಕ್ಷಿಣೆ ಹಾಕಿ ಅಡ್ಬಿದ್ದು ಬಾ, ಶನಿವಾರ ಎಳ್ಳು ದೀಪ ಹಚ್ಚಿಡು. ಅವ್ನೆಲ್ಲಾ ಕಾಪಾಡ್ತನೆ."

9

ಅಪರಂಜಿ ಕಂಡ ವಿಶ್ವ ಕನ್ನಡ ಸಮ್ಮೇಳನ

—ಶಿವು

ಕನ್ನಡಾಂಬೆಯ, ಕೀರ್ತಿಪತಾಕೆಯನ್ನು ನೋಡಲು, ಕನ್ನಡದ ಕಹಳೆಯ ಕೂಗನ್ನು ಕೇಳಲು, ಅಪರಂಜಿಯ ವರದಿಗಾರನಾಗಿ ಚಲುವಿನ ಖನಿ ಮೈಸೂರನ್ನು ನಾನು ಸೇರಿದ್ದು ಭಾನುವಾರ ಬೆಳಿಗ್ಗೆ.

ವಿಶ್ವದ ನಾನಾ ಭಾಗಗಳಿಂದ, ಅಂದರೆ ಶ್ರೀರಂಗಪಟ್ಟಣ. ನಂಜನಗೂಡು ಪಾಂಡವಪುರ. ಇವೆಲ್ಲ ಕಡೆಗಳಿಂದ ಕನ್ನಡ ಸಮ್ಮೇಳನಕ್ಕೆ ಪ್ರತಿನಿಧಿಗಳು ಬಂದಿದ್ದರು. ವಿಶ್ವದ ಅಂಚಿನ ಪ್ರದೇಶವಾದ ದಾವಣಗೆರೆಯಿಂದಲೂ ಪ್ರತಿನಿಧಿಗಳು ಬಂದ್ದಿದ ರೆಂದ ಮೇಲೆ ವಿಶ್ವ ಮೇಳದ ಸಾರ್ಥಕತೆಯನ್ನು ಮತ್ತೆ ಹೇಳಬೇಕಾಗಿಲ್ಲ.

ಮೊದಲು ಹೋದದ್ದೇ ಹೊಯ್ಸಳ ಹೋಟಲಿನ ಆವರಣ. ವಿಶ್ವ ಸಮೇಳನದ ಸ್ವಾಗತ ಕಛೇರಿ ಅಲ್ಲಿ, ಆವರಣದ ಒಂದು ಬದಿಗೆ ಚಪ್ಪರ. ಚಪ್ಪರದ ಕೆಳಗೆ ಸಾಲಾಗಿ ಮೇಜುಗಳು. ಮೇಜಿನ ಆಚೆ, ಕುರ್ಚಿಗಳಲ್ಲಿ ಕಾರ್ಯ ನಿರತ, ನಿರತೆಯರು. ಈಚೆ ಬದಿ ಒಬ್ಬೊಬ್ಬ ಕಾರ್ಯ ನಿರತ/ನಿರತೆಗೂ ಹತ್ತು ಹದಿನೆಂಟು ಪ್ರತಿನಿಧಿಗಳು ಗುಲಾಬಿಯನ್ನು ಮುತ್ತುವ ದುಂಬಿಗಳಂತೆ, ಸುತ್ತು ಗೂಡಿ, ವಸತಿ ಸೌಲಭ್ಯಕ್ಕಾಗಿ ಕಾಡುತ್ತಿದ್ದರು. ನಾನೂ ಗುಂಪಿನಲ್ಲಿ ಸೇರಿಕೊಂಡೆ ನನ್ನ ಸರದಿ ಬಂತು.

ನಾನು :– ನಾನೊಬ್ಬ ಪತ್ರಿಕಾ ವರದಿಗಾರ, ವಿಶ್ವ ಕನ್ನಡ ಸಮ್ಮೇಳನದಲ್ಲಿ ಭಾಗವಹಿಸಲು ಬಂದಿದೇನೆ.

ಕಾರ್ಯನಿರತ :– ನಿಮ್ಮ ಆಹ್ವಾನ ಪತ್ರಿಕೆ ಎಲ್ಲಿ ?

ನಾನು :– ಸಮ್ಮೇಳನದ ಗೋಷ್ಠಿ ಯೊಂದರಲ್ಲಿ ನಾನೊಬ್ಬ ಭಾಷಣಕಾರ. ಆ ಪತ್ರ ಬೇಕಾದರೆ ತೋರಿಸುತ್ತೇನೆ. ನನಗ್ಯಾವ ಆಹ್ವಾನ ಪತ್ರಿಕೆಯೂ ಬಂದಿಲ್ಲ.

ಕಾ.ನಿ :- ಹಾಗಾದರೆ ನಾವೇನೂ ಮಾಡಲಾಗುವುದಿಲ್ಲ. ಇಲ್ಲಿ ಆಹ್ವಾನ ಪತ್ರಿಕೆ ಇರುವ ಪ್ರತಿನಿಧಿಗಳಿಗೆ ಮಾತ್ರ ಉಚಿತ ವಸತಿ ಸೌಲಭ್ಯ.

ನಾನು :- ನನಗೇನು ಉಚಿತ ವಸತಿ ಬೇಡ. ಹಣ ಕೊಡಲು ತಯಾರಿದ್ದೇನೆ. ಊರಿನಲ್ಲಿರುವ ಎಲ್ಲಾ ಹೋಟೆಲುಗಳ ಎಲ್ಲಾ ಕೊಠಡಿಗಳನ್ನು ಕನ್ನಡ ಸಮ್ಮೇಳನಕ್ಕಾಗಿ ಕಾದಿರಿಸಿದ್ದೀರಿ ವಸತಿಗೆ ವ್ಯವಸ್ಥೆ ಮಾಡಿದರೆ ಉಪಕಾರವಾಗುತ್ತದೆ.

ಕಾ.ನಿ :- ಅದೆಲ್ಲಾ ಸಾಧ್ಯವಿಲ್ಲ. ಬೇಕಾದರೆ, ಅಗೋ ಅಲ್ಲಿರುವ ಸಮ್ಮೇಳನ ಕಛೇರಿಯಲ್ಲಿ ಕೇಳಿ, ಅವರೇನಾದರೂ ಸಹಾಯ ಮಾಡಬಹುದು.

ಸರಿ, ಕಛೇರಿಗೆ ಹೋದೆ. ಅಲ್ಲಿ ಮೂವತ್ತು ಮೂವತ್ತೈದು ಮಂದಿ ಪ್ರತಿನಿಧಿಗಳು ಕಛೇರಿಯಲ್ಲಿದ್ದ ಏಕೈಕ ಕನ್ನಡ ವೀರನನ್ನು ಸುತ್ತುಗಟ್ಟಿದ್ದರು. ಆತ ಅಭಿಮನ್ಯುವಿನಂತೆ, ಆ ಗುಂಪಿನಿಂದ ಹೊರಬರಲಾಗದೇ ಪೇಚಾಡುತ್ತಿದ್ದ. ಗುಂಪಿನ ಅಂಚಿನಲ್ಲಿದ್ದ ಆಸಾಮಿಯೊಬ್ಬನನ್ನು ಆ ಗೊಂಚಲಿನಿಂದ ಬಿಡಿಸಿ ಯಾರೆಂದು ಕೇಳಿದೆ. ಆತನೂ ನನ್ನಂತೆ ಗೋಷ್ಠಿಯೊಂದರಲ್ಲಿ ಭಾಷಣಕಾರ. "ಏನ್ರೀ ನಿಮ್ಮ ಭಾಷಣದ ವಿಷಯ ?" ಎಂದು ಕೇಳಿದೆ. "ಕನ್ನಡದ ಇಂದಿನ ಉನ್ನತಿಗೆ ಮುಖ್ಯ ಕಾರಣ–ಶಿಸ್ತು ಎಂದು ಹೇಳಿ ಪುನಃ ಹೊಸ ಉತ್ಸಾಹದಿಂದ ಗೊಂಚಲನ್ನು ಸೇರಿಕೊಂಡ.

ನನಗೋ ಆತಂಕ, ರಾತ್ರೆ ಇರುವುದು ಎಲ್ಲಿ ? ಇರಲಿ, ವೃಥಾ ಆತಂಕದಿಂದ ರಕ್ತದ ಒತ್ತಡ ಹೆಚ್ಚುತ್ತದೆಯೇ ಹೊರತು, ಬೇರೇ ಪ್ರಯೋಜನವಿಲ್ಲ ಎಂದು ದೂರ ಸರಿದ ನಿಂತೆ. ಚೂಟಿಯಾದ ಜೀನ್ಸ್ ಧಾರಿ ಯುವಕನೊಬ್ಬ ಪ್ರತ್ಯಕ್ಷನಾದ "ಪರಸ್ಥಳದವರಂತೆ ಕಾಣುತ್ತೀರಿ, ವಸತಿ ವ್ಯವಸ್ಥೆ ಆಯಿತೇ ಸಾರ್ ?" ಬಹು ಸೌಜನ್ಯದಿಂದ ಕೇಳಿದ.

"ಇಲ್ಲಾ ಮಗೂ, ಆಹ್ವಾನ ಪತ್ರಿಕೆ ಇಲ್ಲದೇ, ವಸತಿ ಸೌಲಭ್ಯ ಇಲ್ಲವಂತೆ. ಹಣ ಕೊಡುತ್ತೇನೆಂದರೂ ಇಲ್ಲಾ ಅಂತಾರಪ್ಪ "ಅಂತ ನನ್ನ ಆತಂಕವನ್ನು ಹಂಚಿಕೊಂಡೆ.

"ಹೀಗೆ ಬನ್ನಿ ಸಾರ್, ಏನೂ ಯೋಚನೆ ಮಾಡಬೇಡಿ. ಇಗೋ ಇಲ್ಲಿ ತಗೊಳ್ಳಿ ಈ ಹಸಿರು ಬ್ಯಾಡ್ಜ್. ಇಲ್ಲಿರುವ ಖಾಲೀ ಜಾಗದಲ್ಲಿ ನಿಮ್ಮ ಹೆಸರು ಬರೆದುಕೊಂಡು ಬಿಡಿ ಮತ್ತು ಈ ಕೆಂಪು ಕಾರ್ಡ್. ಇಲ್ಲಿ ನಮೂದಿಸಿರುವ ಹೋಟೆಲಿನಲ್ಲಿ ನಿಮಗೆ ಉಚಿತ ವಸತಿ ಸಿಗುತ್ತದೆ"

ಕರುಣಾಳು ಬಾ ಬೆಳಕೆ ಎಂಬ ಕವನದ ನಿಜವಾದ ಅರ್ಥ ಆಗ ಗೊತ್ತಾಯಿತು.

"ತುಂಬಾ ವಂದನೆಗಳು, ಈ ಸ ಹಾ ಯ ಕ್ಕೆ ನನ್ನ ಸ್ವಸಂತೋಷದಿಂದ ಸಂಭಾವನಕೊಟ್ಟರೆ ತಪ್ಪು ತಿಳಿಯುವುದಿಲ್ಲಾ ತಾನೇ" ಎಂದು ಹೇಳಿ, ಇಪ್ಪತ್ತು ರೂಪಾಯಿಗಳನ್ನು ಅವನ ಕೈಲಿಟ್ಟೆ.

"ಥ್ಯಾಂಕ್ಸ್ ಎಲಾಟ್" ಅಂತ ಅಚ್ಚ ಕನ್ನಡದಲ್ಲಿ ನನ್ನನ್ನು ವಂದಿಸಿ ಆತ ಮಾಯವಾದ.

ಅವನು ಕೊಟ್ಟ ಕೆಂಪುಕಾರ್ಡಿನ ಜೊತೆ, ಪ್ರತಿನಿಧಿಗಳಿಗೆ ಉಚಿತ ಊಟದ ವ್ಯವಸ್ಥೆ ಬಗ್ಗೆ ಸೂಚನೆಗಳಿದ್ದವು. ಅದರ ಪ್ರಕಾರ ಅಂದಿನ ಮಧ್ಯಾಹ್ನದಊಟ ರಂಗಮಂದಿರದಲ್ಲಿ. ರಂಗ ಮಂದಿರ ಸೇರಿದಾಗ ಒಂದು ಘಂಟೆ. ಹಲವಾರು ಪ್ರತಿನಿಧಿಗಳು ಅಲ್ಲಿ ಗೊತ್ತುಗುರಿಯಿಲ್ಲದೇ ತಿರುಗುತ್ತಿದ್ದರು. ಊಟದ ಬಗ್ಗೆ ನಾನು ಕೇಳುವ ಮುಂಚೆಯೇ, ಅವರಲ್ಲೊಬ್ಬ ನನ್ನನ್ನೇ ಕೇಳಿದ, "ಊಟೋಪ ಚಾರ ರಂಗಮಂದಿರದಲ್ಲಿ ಅಂತಿದೆಯಲ್ಲಾ ಎಲ್ಲಿ ನಡೆಸಿದ್ದಾರ್ರೀ ?" ಕೊನೆಗೂ ಒಬ್ಬ ಕಾರ್ಯನಿರತ ಸಿಕ್ಕ, ಅವನನ್ನು ಕೇಳಿದಾಗ ತೋರಿಸಿದ್ದು, ರಂಗಮಂದಿರದ ಮುಂದಿನ ಉದ್ಯಾನವನ. ನನಗೆ ನಿಜವಾಗಿಯೂ ವ್ಯವಸ್ಥಾಪಕರ ಬಗ್ಗೆ ಅಭಿಮಾನ ವೆನಿಸಿತು. ಅಲ್ಲ, ಕನ್ನಡ ಮೇಳದ ಪ್ರತಿನಿಧಿಗಳಿಗೆ ಮರಗಳ ನೆರಳಿನ ತಂಪು ವಾತಾವರಣದಲ್ಲಿ ವನಭೋಜನ ನಡೆಸಿಕೊಡುತ್ತಿದ್ದಾರಲ್ಲಾ ಎಂತಹ ಸೌಜನ್ಯ! ಉದ್ಯಾನವನದ ಕಡೆ ಹೊರಟಾಗ ಒಂದು ವಿಚಿತ್ರ ದೃಶ್ಯ ಕಾಣಿಸಿತು. ಕುದುರೆಗಳ ಮೇಲೆ ಸುಸಜ್ಜಿತ ರಾವುತರು, ಅವರ ಸುತ್ತ ಉದ್ಯಾನವನದ ದ್ವಾರದ ಮುಂಬಾ ಗಿಲಿನಲ್ಲಿ ಹಾಹಾಕಾರ ಮಾಡುತ್ತಿದ್ದ ಜನಸ್ತೋಮ, ನಮ್ಮ ಪ್ರತಿನಿಧಿ ಮಿತ್ರ ರೊಬ್ಬರು, ಕಾರ್ಯಕ್ರಮದ ಪಟ್ಟಿಯಲ್ಲಿ ಬೀದೀನಾಟಕ ಅಂತಿದೇರೀ. ಅದರ ಒಂದು ದೃಶ್ಯ ಇರಬಹುದು ಅಂತ ಅಭಿಪ್ರಾಯಪಟ್ಟರು ಅಷ್ಟು ಹೊತ್ತಿಗೆ ಕೂಗಾಡುತ್ತಿದ್ದ ಜನರ ಗುಂಪಿನಿಂದ ಒಬ್ಬ ನಮ್ಮತ್ತ ಓಡಿಬಂದ. ಆತನ ಜುಬ್ಬದ

ಮೇಲೆ ಹಸಿರು ಬ್ಯಾಡ್ಜ್. ನನ್ನ ಅಂಗಿಯ ಮೇಲಿರುವಂತಹದೇ, ನಮಗೆಲ್ಲಾ ಗಾಭರಿ. "ಏನಾಯಿತು" ಒಕ್ಕೊರಲಿನಿಂದ ಕೇಳಿದೆವು.

"ಊಟದ ವ್ಯವಸ್ಥೆಗೆ ಬೆಳಗ್ಗೆ ಹನ್ನೊಂದು ಗಂಟೆಯಿಂದಲೇ ಅನೇಕ ದಾರಿ ಹೋಕರು ಒಳಗೆ ನುಗ್ಗಿ ತುಂಬಿ ಬಿಟ್ಟಿದ್ದಾರೆ. ಈಗ ಪ್ರತಿನಿಧಿಗಳು ಬಂದಾಗ ಒಳಗೆ ಜಾಗವಿಲ್ಲದೇ ಈ ಗೌರವಾನ್ವಿತರು ಕೂಗಾಟ ನಡೆಸಿದ್ದಾರೆ. ಇವರನ್ನು ಚದರಿಸಲು ನಮ್ಮ ನೆಚ್ಚಿನ ಕನ್ನಡ ನೇತಾರರು ಕುದುರೆ ರಾವುತರನ್ನು ಹಾಯಿಸು ತ್ತಿದ್ದಾರೆ. ಬೇಗ ದೂರ ಸಾಗದಿದ್ದರೆ ಕನ್ನಡದ ಕುದುರೆ ಕಾಲಕೆಳಗೆ ಸಿಗಬೇಕಾಗು ತ್ತದೆ ಜೋಕೆ" ಎಂದು ಹೇಳಿ ಕಂಬಿ ಕಿತ್ತ. ನಮ್ಮ ಧಾರವಾಡದ ಮಿತ್ರರೊಬ್ಬರು "ಸೇಂಗಾ ತಿನ್ರಿ, ದೇಹಕ್ಕ ಭಾಳ ಒಳ್ಳೇದು" ಅಂತ ಹೇಳಿ ಒಂದು ಹಿಡಿ ಕಡಲೇ ಕಾಯಿ ಕೊಟ್ಟರು.

ಸೇಂಗಾ ತಿಂದು ಎರಡು ಘಂಟೆಗೆ ಸಾಹಿತ್ಯ ಗೋಷ್ಠಿಯಲ್ಲಾದರೂ ಭಾಗ ವಹಿಸೋಣ ಅಂತ ಕ್ರಾಫರ್ಡ್ ಭವನಕ್ಕೆ ಹೋದೆ. ಅಲ್ಲಿ ಹೆಸರಾಂತ ಭಾಷಣಕಾರ ರೊಬ್ಬರು, ಎತ್ತರಿಸಿದ ಧ್ವನಿಯಲ್ಲಿ ಕನ್ನಡಿಗರು ಷಂಡರು" ಎಂದೊಡನೆಯೇ ನೆರದಿದ್ದ ಜನ ಸ್ತೋಮದಿಂದ ಭಯಂಕರ ಚಪ್ಪಾಳೆಯಾಯಿತು. ಇದನ್ನೆಲ್ಲಾ ನೋಡಿ ನಮ್ಮ ಪ್ರಧಾನಿಯವರು ಈಸಬೇಕು ಇದ್ದು ಜೈಸಬೇಕು ಅಂದರು. ಅಂದ ಹಾಗೆ ನನ್ನ ಭಾ ಷ ಣ ದ ವಿಷಯ "ಕನ್ನಡಿಗನಿಗೆ ಹಾಸ್ಯ ಪ್ರಜ್ಞೆಯ ಅಗತ್ಯತೆ"

ಕನ್ನಡ ತಾಯ್‌ಗೆ ನಮಸ್ಕಾರ.

ಭವಿಷ್ಯ ನಿಜವಾಯಿತು

ಲೀಲಾ ಮಿರ್ಲೆ

ನಂ ಸುರೇಶಂಗೆ ಜ್ಯೋತಿಷ್ಯದಲ್ಲಿ ನಂಬಿಕೆಯೇ ಇಲ್ಲ. ಆದ್ರೆ ಭಾನುವಾರ ಎದ್ದ ತಕ್ಷಣ ಏನ್ ಮಾಡ್ತಾನೆ ಗೊತ್ತೆ ? ಪೇಪರ್ ತೆಗೆದು ವಾರಭವಿಷ್ಯ ಓದು ತ್ತಾನೆ. "ಏನೊ ಸುರೇಶ ನಿಂಗ್ ಇದ್ರಲ್ಲೆಲ್ಲಾ ನಂಬಿಕೆ ಇಲ್ಲ ಅಂತಿ. ಮತ್ ಯಾಕ್ ಓದ್ತಿ ಅಂದ್ರೆ, 'ಸುಮ್ನೆ ರೊಟೀನಾಗಿ ನೋಡ್ತಿನಿ' ಅಷ್ಟೆ, ಇದನ್ ಯಾರ್ ನಂಬ್ತಾರೆ' ಅಂತಾನೆ.

ಜೋತಿಷ್ಯದಲ್ಲಿ ನಂಬಿಕೆ ಇರಲಿ ಬಿಡಲಿ, ಮುಂದಾಗುವುದನ್ನು ಹೇಳ್ತಿವಿ ಎಂದರೆ, ಕೇಳಿ ನೋಡೋಣ ಎನ್ನಿಸುತ್ತೆ ಮನಸ್ಸು.

ಸುಮಾರು 10–12 ವರ್ಷಗಳ ಹಿಂದಿನ ಮಾತು. ನಂ ದೊಡ್ಡಮ್ಮನ ಮಗಳು ರಶ್ಮಿಗೆ ಆಗಿನ್ನೂ ಹದಿನಾರು ವರ್ಷ. ದೊಡ್ಡಮ್ಮಂಗೆ ಆಗಲೇ ಮಗಳ ಮದುವೆ ಯೋಚನೆ. ಒಂದ್ ದಿನ ನಾನ್ ಅವರ ಮನೆಗೆ ಹೋದಾಗ, 'ನೋಡು ಮಾರ್ಕೆಟ್ ಹತ್ರ ಒಂದು ಗಲ್ಲಿ ಇದೆಯಲ್ಲಾ. ಅಲ್ಲಿ ಮೂರನೆ ಮನೆ ಮಹಡಿ ಮೇಲೆ ಒಬ್ಬರು ಭಟ್ಟರಿಂದಾರಂತೆ, ತುಂಬಾ ಚೆನ್ನಾಗಿ ಜಾತಕ ನೋಡ್ತಾರಂತೆ, ನಂ ರಶ್ಮಿ ಜಾತಕಾನ ಅವರಿಗೆ ತೋರಿಸೋಣ ಅಂತ, ನಾಳೆ ಮಧ್ಯಾಹ್ನ ಹೋಗೋಣಾಂತ ಇದೀನಿ, ನೀನೂ ಬಾ" ಅಂದ್ರು 'ಅದಕ್ಕೇನು ಬರ್ತೀನಿ' ಅಂದೆ.

ಮೂರನೆಯ ದಿನ ಇಬ್ರೂ ಭಟ್ಟರ ಮನೆ ಹುಡುಕಿಕೊಂಡು ಹೋದ್ವಿ, ಸಂದಿ ಗೊಂದಿ ದಾಟಿ ಇಕ್ಕಟ್ಟಾದ ಮಹಡಿ ಹತ್ತಿ ಭಟ್ಟರ ಮನೆ ಸೇರದ್ವಿ. ದೊಡ್ಡಮ್ಮ ಜಾತಕಾನ ಭಟ್ಟರ ಕೈಗೆ ಕೊಟ್ಟು, 'ಮದುವೆ ಯಾವಾಗ್ ಆಗತ್ತೇಂತ ಕೇಳೊಕ್ಕೆ ಬಂದೆ' ಅಂದ್ರು,

ಭಟ್ಟರು ಜಾತಕಾನ ಮೇಲಿಂದ ಕೆಳಗೆ ನೋಡಿ, "ಇದು ಗಂಡು ಜಾತಕ" ಅಂದ್ರು.

"ಇಲ್ಲಾ ಭಟ್ಟರೆ, ಇದು ನನ್ನ ಮಗಳ ಜಾತಕ" ಅಂದ್ರು ದೊಡ್ಡಮ್ಮ ಮೆಲುದನಿಯಲ್ಲಿ.

"ಗೊತ್ತು ಗೊತ್ತು, ಮಗಳ ಜಾತಕವೇ, ಅದ್ರೆ ಈ ಹೆಣ್ಣು ಮಗು ಯಾವ ಗಂಡಸಿಗೂ ಕಮ್ಮಿ ಇಲ್ಲಾ, ತನಗೆ ಹ್ಯಾಗ್ ಬೇಕೊ ಹಾಗ್ ಇರ್‍ತಾಳೆ. ಯಾರ್ ಯಾರ್ ಮಾತೂ ಕೇಳೊಲ್ಲ. ಪರವಾಗಿ" ಅಂದ್ರು.

'ಮದುವೆ ಆಗತ್ತೆ ಕಾತರವಾಗಿ ಕೇಳಿದ್ರು ದೊಡ್ಡಮ್ಮ

"ಗುರುದೆಸೆ ಆಗಲೇ ಶುರುವಾಗಿಬಿಟ್ಟಿದೆ, ಜಾಸ್ತಿ ಎಂದರೆ ಆರು ತಿಂಗಳು. ಆರು ತಿಂಗಳೊಳಗೆ ಕಂಕಣ ಪ್ರಾಪ್ತಿ ಖಂಡಿತ. ಹುಡುಗ ನಿಮ್ಮ ಜಾತಿಯವನೇ ಆಗಿರುತ್ತಾನೆ. ಹುಡುಗಿಗೆ ಸ್ವದೇಶದಲ್ಲೇ ಇರೊ ಯೋಗವಿದೆ. ಪರವಾಗಿಲ್ಲ ಬಿಡಿ, ನಿಂ ಕಣ್ಣೆದುರಿಗೇ ಇರ್‍ತಾಳೆ. ನಿಂ ಮಗಳು" ಅಂದ್ರು ಭಟ್ಟರು.

"ಜಾತಕದಲ್ಲಿ ಇನ್ನೇನಾದ್ರೂ ಗೊತ್ತಾಗತ್ತೆ" ಅಂತ ದೊಡ್ಡಮ್ಮ ಕೇಳದ್ರು.

"ನಿಮಗೆ ಹುಡುಗನ ಪ್ರಥಮ ಭೇಟಿ ವಿವಾಹ ಮಂಟಪದಲ್ಲಿ. ಅಂದ್ರೆ ಯಾವುದೊ ಮದುವೆ ಮನೆಗೆ ನೀವು ಹೋದಾಗ, ಅಳಿಯ ಆಗಲಿರುವ ಹುಡುಗ ನಿಮ್ಮ ಕಣ್ಣಿಗೆ ಬೀಳ್ತಾನೆ" ಎಂದ್ರು ಭಟ್ಟರು.

ದೊಡ್ಡಮ್ಮ ಹಿಗ್ಗಿ ಹೋದ್ರು ಮದುವೆ ಆಗೇ ಹೋಯ್ತು ಅನ್ನುವಷ್ಟು ಸಂತೋಷ ಆಯಿತು ಅವರಿಗೆ, ಭಟ್ಟರಿಗೆ ಕೈ ತುಂಬಾ ದಕ್ಷಿಣೆಯೂ ಸಿಕ್ಕಿತು.

ಮುಂದಿನ ಆರು ತಿಂಗಳು ಕರೆದ ಎಲ್ಲಾ ಮದುವೆ ಮನೆಗೂ ದೊಡ್ಡಮ್ಮ ಹಾಜಾರ್, ತೆಂಗಿನ ಕಾಯಿ, ಮದುವೆ ಊಟ ಸಿಕ್ಕಿತೆ ವಿನಹ ದೊಡ್ಡಮ್ಮನಿಗೆ ಅಳಿಯ ಕಾಣಿಸಿಕೊಳ್ಳಲಿಲ್ಲ!

ಆರು ವರ್ಷಗಳ ನಂತರ, ರಶ್ಮಿ ಬರೋಡದಲ್ಲಿ ಎಂ.ಎಸ್ಸಿ ಪಾಸುಮಾಡಿ, ಗುಜರಾತಿ ಹುಡುಗನೊಬ್ಬನನ್ನ ಮದುವೆಯಾಗಿ, ಈಗ ಅಮೇರಿಕಾದಲ್ಲಿ ಇದ್ದಾಳೆ!

ಭವಿಷ ಅಂದಾಗ ಅಭಯಂಕರ್ ಸ್ವಾಮಿಜೀ ಜ್ಞಾಪಕಕ್ಕೆ ಬರ್‍ತಾರೆ. ನಾನು ಹಿಂದೆ ಬೊಂಬಾಯಲ್ಲಿದ್ದಾಗ, ನಮ್ಮವರಿಗೆ ಎರಡು ವರ್ಷದ ಹಿಂದೆ ಆಗಬೇಕಾಗಿದ್ದ ವರ್ಗ ಆಗೇ ಇರಲಿಲ್ಲ. ಇದರಿಂದ ಅನೇಕ ತರಹದಲ್ಲಿ ತುಂಬಾ ತೊಂದರೆ ಯಾಗಿತ್ತು. ಜೋತಿಷ್ಯದಲ್ಲಿ ನನಗಿರುವ ಅರ್ಧಂಬರ್ಧ ನಂಬಿಕೆ ನನ್ನನ್ನು ಅಭಯಂಕರ್ ಸ್ವಾಮೀಜಿಯ ಬಳಿ ಹೋಗುವಹಾಗೆ ಮಾಡಿತು.

ನಮ್ಮವರಿಗೆ ಇದರಲ್ಲೆಲ್ಲಾ ನಂಬಿಕೆ ಇಲ್ಲಾ, ನನಗೆ ಅಲ್ಲಿಗೆ ಒಬ್ಬಳೇ ಹೋಗಲು ಭಯ ಹಾಗಾಗಿ ಬಲವಂತ ಮಾಡಿ ಇವರನ್ನೂ ಕರೆದು ಕೊಂಡು ಹೋದೆ.

ಅಭಯಂಕರ್ ಸ್ವಾಮೀಜಿ ನಮ್ಮನ್ನ ಒಂದು ಸಣ್ಣ ಕೊರಡಿಗೆ ಕರೆದುಕೊಂಡು ಹೋದರು. ಅಲ್ಲಿ ಅಲಂಕೃತವಾದ ಒಂದು ಸಣ್ಣ ಪೀಠ, ಅದರ ಮೇಲೆ ಒಂದು ಜೊತೆ ಹಳೇ ಚಪ್ಪಲಿ. ಆತ ಅದಕ್ಕೆ ನಮಸ್ಕರಿಸಿ, ನಮಗೂ ನಮಸ್ಕಾರ ಮಾಡಲು ಹೇಳಿದರು. ನಮ್ಮವರಿಗೆ ರೇಗೇ ಹೋಯ್ತು ಅಲ್ಲಿಗೆ ಬಂದದ್ದೇ ಒಂದು ದೊಡ್ಡ ಮೆಹರ್‌ಬಾನಿ, ಇನ್ನು ಜೋಡಿಗೆ ನಮ್ಮಸ್ಕರಿಸಲು ಇವರು ತಯಾರಾಗಿರಲಿಲ್ಲ. ಇವರು ಹಿಂದೇಟು ಹಾಕುತ್ತಿರುವುದನ್ನು ಗಮನಿಸಿ, ಆತ ಮರಾಠಿಯಲ್ಲಿ "ಇದು ಬರೀ ಚಪ್ಪಲಿಯಲ್ಲಾ, ಶ್ರೀರಾಮನ ಪಾದುಕೆಯಷ್ಟೇ ಪವಿತ್ರವಾದದ್ದು. ಇದು ನನ್ನ ಗುರುಗಳ ಪಾದುಕೆ. ಬ್ರಹ್ಮಾಂಡವನ್ನು ಭಸ್ಮಮಾಡುವ ಶಕ್ತಿ ಇದಕ್ಕಿದೆ. ನಿಮ್ಮ 'ಅಹಂ' ನ್ನು ಕಮ್ಮಿ ಮಾಡಿ ಸಾಷ್ಟಾಂಗ ನಮ್ಮಸ್ಕರ ಮಾಡಿ" ಎಂದು ಗದರಿಸಿದ. ಬಂದ ತಪ್ಪಿಗೆ ಇಬ್ಬರೂ ಅದಕ್ಕೆ ಅಡ್ಡಬಿದ್ದೆವು.

'ವರ್ಗ ಯಾವಾಗ ಆಗುತ್ತೆ' ಎಂದೆ. ಆತ ಒಂದು ನಿಮಿಷ ಧ್ಯಾನಾಸಕ್ತ ರಾಗಿ ನಂತರ "ಹೂಂ, ಆಗುತ್ತೆ, ಅಗೇ ಆಗತ್ತೆ ನಿಮ್ಮ ಮೇಲಿನ ಅಧಿಕಾರಿಗೆ ನಿಮ್ಮ ಮೇಲೆ ಅಸೂಯೆ. ಅದಕ್ಕೆ ತಡವಾಗಿದೆ. ಆದರೆ ಹತ್ತನೆ ಮನೆಯಲ್ಲಿ ಈಗ ಎಲ್ಲಾ ತುಂಬಾ ಅನುಕೂಲವಾಗಿದೆ. ವರ್ಗವಾಗುವ ಸಮಯ ಬಂದಿದೆ" ಎಂದರು.

ಅಷ್ಟರಲ್ಲಿ ಯುವಕನೊಬ್ಬ ಆತುರವಾಗಿ ಒಳಗೆ ಬಂದ. ಸ್ವಾಮಿಜೀ ಅವನನ್ನು ನೋಡಿ ಕಿರುನಗೆ ಬೀರಿದರು. ಯಾವುದೋ ಹಳೇ ಹೊತ್ತಿಗೆಯನ್ನು ತೆಗೆದು, ಅದರಲ್ಲಿದ್ದ ಲೆಕ್ಕ ಹಾಕಿದ ಚೀಟಿಯನ್ನು ನೋಡಿ, "ರಮೇಶ, 'ಲೇಡಿ ಬರ್ಡ್' ಜ್ಞಾಪಕ ವಿರಲಿ. ಅದರ ಮೇಲೆ ಹಾಕು. ಖಂಡಿತ ಗೆಲ್ಲುತ್ತೆ" ಅಂದರು ಯುವಕ ಹಸನ್ಮುಖಿಯಾದ. ಜೂಜುಕುದುರೆಯ ಭವಿಷ್ಯವನ್ನು ಹೇಳುವ ಸ್ವಾಮೀಜಿಯನ್ನೂ ನೋಡಿದ್ದಾಯಿತು !

ನಮ್ಮವರು ಕೆಲಸ ಬಿಟ್ಟು ಬೇರೆ ಕೆಲಸಕ್ಕೆ ಸೇರಿಕೊಂಡರೇ ವಿನಹ, ವರ್ಗ ವಂತೂ ಆಗಲೇ ಇಲ್ಲ !

ಈ ತರಹ ಇನ್ನೂ ಅನೇಕ ಕೇಸುಗಳನ್ನು ನೋಡಿದ ಮೇಲೆ ಭವಿಷ್ಯ ಹೇಳುವವರಲ್ಲಿ ನಂಬಿಕೆ ಮಂಕಾಗುತ್ತಾ ಬಂತು. ಆದರೆ ಈ ನನ್ನ ಅನಿಸಿಕೆ ತಪ್ಪು ಎಂದು ಮೊನ್ನೆ ಓದಿದ ಮಾಸಭವಿಷ್ಯ ಎತ್ತಿತೋರಿಸುತ್ತದೆ.

ಮಾಸಪತ್ರಿಕೆಗಳಲ್ಲಿ ಬರುವ ಭವಿಷ್ಯವಾಣಿಗಳು ಸ್ವಲ್ಪ ಅಸಂಬದ್ಧವಾಗಿದ್ದರೂ ತುಂಬಾ ಮನರಂಜಕವಾಗಿರುತ್ತದೆ. ಈ ತಿಂಗಳು ನನ್ನ ರಾಶಿಯವರಿಗೆ ಒಗ್ಗದ ಭೋಜನದಿಂದ ಉದರ ಬೇನೆ, ಹೆಸರುಕಾಳಿನಿಂದ ನಷ್ಟ, ಗೊಬ್ಬರದಿಂದ ಲಾಭ, ನೀರಿಗೆ ತೊಂದರೆ, ರಾಜಕೀಯ ಸಂಪಿನಲ್ಲ ಮೂಗಿಗೆ ಪೆಟ್ಟು..................... ಇತ್ಯಾದಿಗಳ ಮಧ್ಯೆ ಬೋರಿನ ಬರಹದಿಂದ ಸಾರ್ವಜನಿಕರಿಗೆ ಬಾಧೆ" ಎಂದಿತ್ತು. ಯಾಕೋ ಭವಿಷ್ಯ ನಿಜವಾದ ಹಾಗೆ ಕಾಣತ್ತಲ್ಲಾ !

17

ಪ್ರಥಮ ಚುಂಬನ

ಡಾ॥ ಎಸ್. ಕೃಷ್ಣಮೂರ್ತಿ

ಅಪರೂಪಕ್ಕೆ ಅತ್ತೆ ಮನೆಗೆ ಹೋಗಿದ್ದೆ. ಮದ್ಯಾಹ್ನ ಪುಷ್ಕಳವಾಗಿ ತಿಂದು ಗೊರಕೆ ಹೊಡೆಯುತ್ತಾ ಮಲಗಿದ್ದೆ. ನಮ್ಮ ಅತ್ತೆ ಮನೆಗೆ ಹೋದಾಗ ನಾನು ಅವರಿಂದ ಬಯಸುವುದು ಒಂದು ದಿಂಬು ಮತ್ತು ಚಾಪೆ ಮಾತ್ರ. ಬೆಂಗಳೂರಿನಲ್ಲಿ ಸಾಧ್ಯವಿಲ್ಲದ ನಿದ್ದೆ, ಕನಸು ವಿರಾಮ ಎಲ್ಲವನ್ನೂ ಎರಡು ದಿವಸಗಳಲ್ಲಿ ಗಿಟ್ಟಿಸ ಬೇಕು ಅನ್ನುವ ಹಟ ನನ್ನದು. ಆದರೆ ನನ್ನ ಗ್ರಹಚಾರ ಬಿಡಬೇಕಲ್ಲ ನನ್ನ ಭಾವಮೈದುನ ರೂಮಿಗೆ ಬಂದ, "ಭಾವ ನಮ್ಮ ಕ್ಲಬ್ ಮೀಟಿಂಗ್ ಇದೆ ಬರುತ್ತೀರಾ ಅಂದ. ನನ್ನ ಕಿವಿ ನೆಟ್ಟಗಾಯಿತು. ಕ್ಲಬ್ ಮೀಟಿಂಗ್ ಅಂದ ಮೇಲೆ ಪಾನಕ ಸಮಾರಾಧನೆ ಇದ್ದೇಇರುತ್ತದೆ. ನಮ್ಮ ಅತ್ತೆ ಮುಂದೆ ಕೂತಿದ್ದರೆ ನಿಂಬೇಹಣ್ಣಿನ ಪಾನಕ ಬಿಟ್ಟರೆ ಇನ್ನೇನೂ ಸಿಗುವುದಿಲ್ಲ ಅಂತೆಲ್ಲ ಯೋಚನೆ ಮಾಡಿ "ಹೂಂ ಬರುತ್ತೀನಿ ಅಂದೆ. "

ಅವರ ಕ್ಲಬಿಗೆ ಹೋದ ಮೇಲೆ ನನ್ನ ಪೆಂಗತನ ಅರ್ಥವಾಯಿತು. ಬೆಂಗಳೂರಿನ ಲಯನ್ಸ್ ಕ್ಲಬ್ ಅಥವಾ ರೋಟರಿ ಕ್ಲಬ್ ಇದ್ದ ಹಾಗೆ ಅವರದೂ ಒಂದು ಕ್ಲಬ್ಬು. ಬರೀ ಭಾಷಣಗಳಿಗೆ, ಪುಕ್ಕಟ್ಟೆ ಸಲಹೆಗಳಿಗೆ ಹೆಸರಾದದ್ದು. ಎಲ್ಲಾ ಮುಗಿದ ಮೇಲೆ ಒಂದಿಷ್ಟು ಕೋಸಂಬರಿ ಹಾಗೂ ಅರ್ಧ ಕಪ್ ಕಾಫಿ ಸಿಕ್ಕಿದರೆ ಹೆಚ್ಚು. ಇನ್ನು ಎರಡು ಮೂರು ಗಂಟೆ ಒಂದೇ ಸಮನೆ ಒಬ್ಬರಾದ ಮೇಲೊಬ್ಬರು ಕೊರೆಯುತ್ತಾರೆ ಅಂತ ಅರ್ಥವಾದ ಮೇಲೆ, ನಿಂಬೇಹಣ್ಣಿ ಪಾನಕಾನೇ ಚೆನ್ನಾಗಿರುತ್ತಿತ್ತಲ್ಲ, ಎಂಥ ತಪ್ಪು ಮಾಡಿದೆ ಅಂತ ಅನಿಸಿತು. ತಲೆ ಕೊಟ್ಟಿದ್ದಾಯಿತು ಇನ್ನು ಚಿಂತಿಸಿ ಪ್ರಯೋಜನವಿಲ್ಲ, ಇದ್ದದ್ದರಲ್ಲಿ ಲಾಭ ಪಡೆಯು ಬೇಕು ಅಂತ ತೀರ್ಮಾನಿಸಿ ಒಂದು ಕಡೇ ಬೆಂಚು ಆರಿಸಿ ಕುಳಿತುಕೊಂಡೆ. ಕೂತಕಡೆ ತೂಕಡಿಸಿಬಿಡೋಣ ಅಂತ ನನ್ನೆಣಿಕೆ. ಆದರೆ ಮತ್ತೆ ಗ್ರಹಚಾರ ಬಿಡಬೇಕಲ್ಲ.

ನನ್ನ ಭಾವಮೈದುನನ ಹೆಂಡತಿ ಅಲ್ಲಿದ್ದ ಮುಖ್ಯಸ್ಥರ ಕಿವಿಯಲ್ಲಿ 'ಏನೋ ಉಸುರಿದಳು. ಆಗ ತಕ್ಷಣ ಬಂದು ನನ್ನ ಪ್ರತಿಭಟನೆಯನ್ನೂ ಕೇಳಿಸಿಕೊಳ್ಳದೆ

ಎಳೆದುಕೊಂಡು ಹೋಗಿ ನನ್ನನ್ನು ಮುಂದಿನ ಖುರ್ಚಿಯಲ್ಲಿ ಕೂಡಿಸಿದ. ಭಾಷಣ ಕೇಳಲೇಬೇಕು, ಭಾಷಣಕಾರರ ಎಂಜಲನ್ನೆಲ್ಲಾ ಮೈಮೇಲೆ ಸುರಿಸಿಕೊಳ್ಳಲೇ ಬೇಕು, ಅವರು 'ಏನು ಹೇಳುತ್ತಾರೆ ಎಂದು ಅರ್ಥವಾಗದಿದ್ದರೂ ತಲೆ ಅಲ್ಲಾಡಿಸಿ ಚಪ್ಪಾಳೆ ಹೊಡೆಯಬೇಕು, ಮತ್ತು ಎಲ್ಲದಕ್ಕಿಂತಾ ಹೆಚ್ಚಾಗಿ ಆ ಜಾಗದಲ್ಲಿ ತೂಕಡಿಸಬಾರದು, "ಎಲಾ, ಎಲಾ ನಾನು 'ಏನು ತಪ್ಪು ಮಾಡಿದ್ದಕ್ಕೆ ನನ್ನ ಭಾವಮೈದುನನ ಹೆಂಡತಿ ನನಗೆ ಈ ಶಿಕ್ಷೆ ಕೊಟ್ಟಳೋ ಅಂತ ಯೋಚಿ ಸುತ್ತಾ ಕುಳಿತೆ. ಒಂದು ಬಾರಿ ಬಿಟ್ಟಿ ಕ್ರಿಕೆಟ್ ಮ್ಯಾಚ್ ತೋರಿಸುತ್ತೀನಿ ಅಂತ ಅವಳನ್ನ ಚಿನ್ನಸಾಮಿ ಸ್ಟೇಡಿಯಂನ ಮೂರನೇ ಮಹಡಿಗೆ ಹತ್ತಿಸಿದ್ದೆ. ಅವಳು ತನ್ನ ಧಡೂತಿ ದೇಹವನ್ನು ಹೊತ್ತುಕೊಂಡು ಮೂರನೇ ಮಹಡಿ ತಲುಪುವಷ್ಟ ರಲ್ಲಿ ನೂರು ರನ್ನು ಹೊಡೆದಿದ್ದ ಸುನಿಲ್ ಗವಾಸ್ಕರನಿಗಿಂತ ಹೆಚ್ಚು ಸುಸ್ತಾಗಿದ್ದಳು. ಅದರ ಸೇಡೇನೋ ಇದು,— ಕರ್ಮ ಅನುಭವಿಸಿಬಿಡೋಣ ಅಂತ ಸಿದ್ಧನಾದೆ.

ಇದ್ದಕಿದ್ದಂತೆಯೇ ಭಾಷಣಕಾರರು ನನ್ನ ಗುಣಗಾನ ಮಾಡಿ ನನ್ನನ್ನು ಮುಂದೆ ಬಂದು ಭಾಷಣ ಮಾಡಬೇಕೆಂದು ಆಜ್ಞಾಪಿಸಿದರು. ಕೂತಕಡೆಯೇ ಲಕ್ವ ಹೊಡೆದ ಅನುಭವವಾಯಿತು ನನಗೆ. ಹಾಳು ಮುಂದಿನ ಖುರ್ಚಿಗೆ ಬಂದು ಕೂರದಿದ್ದರೆ ಈ ಭಾಷಣ ಮಾಡುವುದು, ಬೆವರುವುದು, ತೊದಲುವುದು ಇತ್ಯಾದಿ ಇರುತ್ತಿರಲಿಲ್ಲವಲ್ಲ ಯಾಕಾದರೂ ಇಲ್ಲಿಗೆ ಬಂದೆನೊ ಅನಿಸಿತು,

ಅದೇನು ನನ್ನ ಹಣೇಬರಾನೋ ನೋಡಿ. ಚಿಕ್ಕ ಹುಡುಗನಾಗಿದ್ದಾಗಿನಿಂದ ನನಗು, ಪ್ರಥಮಸ್ಥಾನಕ್ಕೂ ಒಂದು ವಿಚಿತ್ರವಾದ ನೆಂಟು. ನಮ್ಮ ಹಳ್ಳಿಯಿಂದ ಸ್ಕೂಲಿಗೆ ನಾಲ್ಕು ಮೈಲಿ ದೂರವಿತ್ತು. ಒಂದು ಬಸ್ಸು ಆ ದಿಕ್ಕಿನಲ್ಲಿ ಹೋಗು ತ್ತಿತ್ತು. ನಾನು ಎಲ್ಲರಿಗಿಂತ ಮೊದಲು ಬಂದು ಡ್ರೈವರ್ ಪಕ್ಕದ ಸೀಟಿನಲ್ಲಿ ಕೂಡುತ್ತಿದ್ದೆ. ಅಲ್ಲಿ ಕೂತರೆ ನಾನೇ ಡ್ರೈವ್ ಮಾಡಿದಷ್ಟು ಸಂತೋಷ ನನಗೆ. ಒಂದೊಂದು ದಿವಸ ಡ್ರೈವರ್ ಮೂರನೇ ಗೇರ್ ಇಸ್ಲಿಪ್ ಆಗುತ್ತೆ, ಭದ್ರವಾಗಿ ಪಕಡೋ ಅಂತ ಕೆಲಸ ಬೇರೆ ಕೊಡುತ್ತಿದ್ದ. ಅಂತಹ ದಿನ ನಾನು ಬೊಯಿಂಗ್ ಪೈಲೆಟಿನಂತೆ ಠೀವಿಯಿಂದ ನಡೆಯುತ್ತಿದ್ದೆ. ಗೇರ್ ಹಿಡಿದು ಹಿಡಿದು ಭುಜ ಎತ್ತುವುದಕಾಗದಷ್ಟು ನೋವಾಗಿದ್ದರೂ ಸುಮ್ಮನಿರುತ್ತಿದ್ದೆ. ಆದರೆ ನೂರಕ್ಕೆ ತೊಂಬ್ಬತ್ತರಷ್ಟು ದಿನಗಳಲ್ಲಿ ಬಸ್ಸು ನಮ್ಮ ಊರಾಚೆಗಿದ್ದ ಪೋಲೀಸ್ ಸ್ಟೇಷನ್ ತಲುಪುವಷ್ಟರಲ್ಲಿ ಅಲ್ಲಿ ಪೋಲೀಸ್ ಇನ್ಸ್‌ಪೆಕ್ಟರೋ ಅಥವಾ ಊರ ಪುಡಾರಿಯೋ ಯಾರೋ ಎಚ್ಚರು ಕೈ ತೋರಿಸಿ ಬಸ್ಸು ನಿಲ್ಲಿಸುತ್ತಿದ್ದರು. ಕಂಡೆಕ್ಟರ್ ತಕ್ಷಣ "ಲೇ ಹೈದ ನೀನು ಇಲ್ಲಿ ಬಾರೊ ಸಾಹೇಬರಿಗೆ ಮುಂದಿನ ಸೀಟ್ ಬಿಟ್ಟುಕೊಡೊ"

ಅಂತ ಗದರಿಕೊಳ್ಳುತ್ತಿದ್ದ. ನಾನು ಪೆಚ್ಚು ಮುಖ ಹಾಕಿಕೊಂಡು ಕಷ್ಟಪಟ್ಟು ಕಡೆಯ ಸೀಟಿಗೆ ನುಸುಳಿಕೊಳ್ಳುತ್ತಿದ್ದೆ.

ನಂತರ ಸ್ಕೂಲಿನಲ್ಲಿ ಮೊದಲು ಹೋಗಿ ಫಸ್ಟ್‌ಬೆಂಚಿನಲ್ಲಿ ಕುಳಿತುಕೊಳ್ಳುತ್ತಿದ್ದೆ. ನಮ್ಮ ಹಿಸ್ಟರಿ ಮೇಷ್ಟ್ರು ಅಕ್ಬರ್ ಮಾಡಿದ ಘನಕಾರ್ಯಗಳೇನು ಎಂದು ಕೇಳಿದುದಕ್ಕೆ ಕೋಳಿ ಪಲಾವ್ ಮಾಡುವುದರಲ್ಲಿ ಎತ್ತಿದ ಕೈ ಅಂತ ನಮ್ಮ ಮನೆ ಹಿಂದಿನ ರಸ್ತೆಯ ಅಕ್ಬರನ ಸಾಹಸ ಹೇಳಿ ಅವರ ಕೈಯಲ್ಲಿ "ಮೂರ್ಖ ಬರೀ ಮಜ್ಜಿಗೆ ಹುಳಿ ತಿಂದೆ ಕೋಳಿ ಪಲಾವ್ ವಿಚಾರ ಮಾತನಾಡುತ್ತಾನೆ, ಇನ್ನು ಕೋಳಿ ಪಲಾವ್ ತಿಂದರೆ 'ಏನೋ ಗತಿ, ಸ್ಟ್ಯಾಂಡ್‌ಅಪ್ ಆನ್ ದಿ ಬೆಂಚ್" ಎಂದು ಕಡೇ ಬೆಂಚಿಗೆ ಅಟ್ಟುತ್ತಿದ್ದರು.

ಶಾಲೆ ಮುಗಿಸಿ ಕಾಲೇಜಿಗೆ ಬೆಂಗಳೂರಿಗೆ ಬಂದಾಗ ಕ್ರಿಕೆಟ್ ಆಡಬೇಕು ಅಂತ ಹುಚ್ಚು ಹಿಡಿಯಿತು. ಪ್ರತಿದಿನ ನಮ್ಮ ಕಾಲೇಜಿನ ಟೀಮಿಗೆ ಹೋಗಿ ಚೆಂಡು ಎತ್ತಿಕೊಡುವುದನ್ನು ಶುರು ಮಾಡಿದೆ. ಅವರು ಕರೆಯದೇ ಇದ್ದರೂ ಅವರ ಮ್ಯಾಚ್ ಎಲ್ಲಿದ್ದರೂ ಸರಿ ಅಲ್ಲಿಗೆ ಹೋಗಿ ಸ್ಕೋರರ್ ಕೆಲಸ ಶುರು ಮಾಡಿದೆ. ಒಂದು ದಿವಸ ಕಾಲೇಜಿನ 'ಓಪನಿಂಗ್ ಬ್ಯಾಟ್ಸ್‌ಮನ್' ಬರಲಿಲ್ಲ. 'ಏನು ಮಾಡುವುದು ಅಂತ ಅವರು ಯೋಚಿಸುತ್ತಿದ್ದಾಗ' ನಾನೂ ಒಬ್ಬ 'ಓಪನಿಂಗ್ ಬ್ಯಾಟ್ಸ್‌ಮನ್ ಅಂತ ಮುನ್ನುಗ್ಗಿದೆ. ಮೊದಲನೆ 'ಓವರ್‌ನಲ್ಲೇ ಹುಕ್ ಮಾಡಲು ಹೋಗಿ ನಾಲ್ಕು ಹಲ್ಲು ಮುರಿದು ಕೊಂಡು, ಅದೂ ಸಾಲದು ಅಂತ ನಮ್ಮಪ್ಪನ ಕೈಲಿ "ಮಹಾ ಬ್ರಾಡ್‌ಮನ್ ಇವನು ಮೊದಲನೇ ಓವರ್‌ನಲ್ಲೇ ಹುಕ್ ಮಾಡುತ್ತಾನೆ" ಅಂತ ಉಗಿಸಿಕೊಂಡೆ.

ನಂತರ ಮೆಡಿಕಲ್ ಕಾಲೇಜ್ ಸಹವಾಸ. ಯಾರೂ ಮುಟ್ಟದಿದ್ದ ಹೆಣವನ್ನು ನಾನು ಕತ್ತರಿಸುತ್ತೇನೆ ಅಂತ ಮುನ್ನುಗ್ಗಿದೆ. ಇದ್ದಕ್ಕಿದ್ದಂತೆಯೆ ತಲೆ ಚಕ್ಕರ್ ಬಂತು. ಧಡಾರ್ ಅಂತ ಹಿಂದೆ ಬಿದ್ದು ಬುರುಡೆ ಊದಿಸಿಕೊಂಡೆ. ನಾನು ಕಾಲೇಜ್ ಬಿಡುವ ತನಕ ನನ್ನ ಗಂಡಸ್ತನ ಕುರಿತು ನನ್ನ ಕ್ಲಾಸ್ ಹುಡುಗಿಯರು ಮಾತನಾಡಿ ನಗುವುದಕ್ಕೆ ಅವಕಾಶ ಮಾಡಿಕೊಟ್ಟೆ. ಹೀಗೆಯೇ ಹೊಟ್ಟೆ ನೋವಿನ ಮೊದಲನೆಯ ಪೇಷೆಂಟಿನ ಗಂಟಲು ಪರೀಕ್ಷೆ ಮಾಡಿ ಉಗಿಸಿಕೊಂಡೆ. ಪರೀಕ್ಷೆಯಲ್ಲಿ ಮೊದಲು ಹೋದರೆ ಒಳ್ಳೆಯದು ಅಂತ ನುಗ್ಗಿ ಪರೀಕ್ಷಾಕಾರರು ಅರ್ಧಗಂಟೆ ನನ್ನನ್ನು ಪರೀಕ್ಷಿಸುವುದಕ್ಕೆ ಅವಕಾಶ ಮಾಡಿಕೊಟ್ಟು ಡುಮ್ಕಿ ಹೊಡೆದೆ. ನಂತರ ತಿಳಿಯಿತು ಕಡೆಯಲ್ಲಿ ಹೋಗಿದ್ದರೆ ಅವರಿಗೂ ಸುಸ್ತಾಗಿರುತ್ತಿತ್ತು ಎರಡೇ ನಿಮಿಷ ಪರೀಕ್ಷೆ ಮಾಡಿ ಪಾಸ್ ಮಾಡಿಸುತ್ತಿದ್ದರು ಅಂತ.

ವಾಕ್ಟರ್ ಆದ ಮೇಲೆ "ಪೂಜ್ಯ ರಾ ಶಿ. ಅವರಲ್ಲಿ ಕೆಲಸ ಶುರುಮಾಡಿದೆ. ಯಥಾ ಪ್ರಕಾರ ಎಲ್ಲಾ ನನಗೆ ಬರುತ್ತದೆ ಅಂತ ಹೇಳಿಕೊಂಡು ಮುನ್ನುಗ್ಗುವುದು. ಪೆಚ್ಚುಮುಖ ಹಾಕಿಕೊಂಡು ಓಂತಿರುಗುವುದು ನಿತ್ಯೋತ್ಸವವಾಯಿತು. ಒಂದು ದಿನ "ರಾ.ಶಿ. ಯವರು ದವಾಖಾನೆಗೆ ಬಂದಿರಲಿಲ್ಲ. "ಮೊದಲ ಬಾರಿಗೆ" ಅವರ ಖುರ್ಚಿಯಲ್ಲಿ ನಾನು ಕೂತಿದ್ದೆ. ಟೈ ಕಟ್ಟಿಕೊಂಡು ಬಿಳಿಕೋಟ್ ಹಾಕಿಕೊಂಡು ಬಹಳ ಜಬರದಸ್ತಿನಿಂದ ರಾ.ಶಿ.ಯವರಂತೆಯೇ ಯಾವುದೋ ಮ್ಯಾಗ್ಸೈನ್ ಹಿಡಿದು ಕೊಂಡು ಕೂತಿದ್ದೆ. "ನಾನೇ ರಾ.ಶಿ. ಅಂತ ಅಂದುಕೊಂಡಿದ್ದೆ ಅಂದರೂ ತಪ್ಪಿಲ್ಲ. ಮೊದಲನೆಯ ಪೇಷಂಟ್ ಒಬ್ಬ ಬಂದ. ಬಾಗಿಲಲ್ಲೇ ಒಂದು ನಿಮಿಷ ನಿಂತು ಕೊಂಡ. ಒಂದು ವಿಚಿತ್ರ ರೀತಿಯಲ್ಲಿ ನನ್ನನ್ನೇ ನೋಡಿದ. ನಾನು ಜಬರ್‌ದಸ್ತಿ ನಿಂದ ಏನಾಗಬೇಕಿತ್ತು ಅಂತ ಕೇಳಿದೆ.

ಡಾಕ್ಟರ್ ಇನ್ನೂ ಬಂದಿಲ್ಲವಾ ಅಂತ ಅವ ಕೇಳಿದ.

ಒಂದೇ ವಾಕ್ಯದಲ್ಲಿ ನನ್ನ ಜಂಭ ಪೂರ್ತಿಯಾಗಿ ಮುರಿದಿದ್ದ. "ನನ್ನ ಬಿಳಿ ಕೋಟ್ ನೋಡಿ ನಾನೇನು ಹಜಾಮ ಅಂತ ತಿಳಿದುಕೊಂಡೆಯಾ ಅಂತ ಕೇಳಬೇಕು ಅನ್ನುವಷ್ಟು ಕೋಪ ನನಗೆ ಬಂತು. ಸಧ್ಯ ಪುಣ್ಯ, ತಡೆದುಕೊಂಡೆ.

ಸ್ವಲ್ಪ ಸಮಯದಲ್ಲೇ "ಡಾಕ್ಟರ್ ಗಂಡು" ಒಬ್ಬ ಇದಾನೆ ಅಂತ ಪ್ರಚಾರ ಆಯಿತು. ಸರಿ. ನನ್ನ ನೋಡುವುದಕ್ಕೆ ಕನ್ಯಾಪಿತೃಗಳ ಸಾಲು ಶುರುವಾಯಿತು. ನನಗೂ ಆದಷ್ಟುಬೇಗ ಮದುವೆ ಮಾಡಿಕೋಬೇಕು ಅಂತ ಆತುರ. ನೋಡಿದ "ಮೊದಲನೇ ಹುಡುಗಿಯನ್ನೇ" ಒಪ್ಪಿಕೊಂಡುಬಿಟ್ಟೆ. ಆದರೆ ನನ್ನ ಗ್ರಹಚಾರ ಬಿಡಬೇಕಲ್ಲ, 'ಆ ಹುಡುಗಿ ಈ ಹಾಳು ಡಾಕ್ಟರ್‌ಗಳಿಗೆ ಯಾವಾಗಲೂ ಕೆಲಸ, ಜೊತೆಗೆ ಇವನು ಕ್ರಿಕೆಟ್ ಬೇರೆ ಆಡುತ್ತಾನಂತೆ. ಭಾನುವಾರನೂ ಇವನು ನನ್ನ ಕೈಗೆ ಸಿಗೋಲ್ಲಾ, ನಾನೊಲ್ಲೆ ಇವನನ್ನ ಅಂದಳು. ಮುಖಕ್ಕೆ ಮಂಗಳಾರತಿ ಆಯಿತು. ಅವತ್ತಿನಿಂದ ಯಾವುದಕ್ಕೂ ಮುಂದೆ ಹೋಗಬಾರದು ಅಂತ ಅನಿಸಿತು. ಕಡೆಯ ಖುರ್ಚಿ, ಕಡೆಯ ಪಂಕ್ತಿ ಕಡೆಗೆ ಇನ್ಯಾರು ಒಳ್ಳೆಯವನು ಸಿಗಲಿಲ್ಲ ಅಂತ ನನ್ನ ಮದುವೆ ಮಾಡಿಕೊಂಡ ಹುಡುಗಿ ಇವೇ ಹಿತವಾಯಿತು. ಈ ಅನುಭವ ದಿಂದಲೋ ಏನೋ ಆ ದಿನ ನಮ್ಮ ಅತ್ತೆಯ ಊರಿನಲ್ಲಿ ನನ್ನನ್ನು ಮೊದಲ ಖುರ್ಚಿ ಯಲ್ಲಿ ಕೂರಿಸಿ ಭಾಷಣ ಮಾಡಿ ಅಂದಾಗ ನನ್ನ ಜಂಗಾಬಲ ಉಡುಗಿ ಹೋಯಿತು. ಆದರೆ ಯಾರಿಗಾದರೂ ಒಂದು ಸಲವಾದರೂ ಅದೃಷ್ಟ ಹೊಡೆಯಬೇಕಲ್ಲ; ನಮ್ಮ ಕೆ.ಇ.ಬಿ. ರವರ ದಯೆ. ಇದ್ದಕಿದ್ದಂತೆಯೇ ಕರೆಂಟ್ ಹೋಯಿತು. ತಕ್ಷಣಾ

ಅಲ್ಲಿಂದೆ ತಪ್ಪಿಸಿಕೊಂಡು ಓಡಿಹೋದೆ. ಪ್ರಥಮ ಸ್ಥಾನ ಅಂದರೆ ಅಷ್ಟು ಹೆದರಿಕೆ ನನಗೆ.

ಇದೀಗ ಪ್ರಪ್ರಥಮವಾಗಿ" ಅಪರಂಜಿಗೆ" ಈ ಕಾಡುಹರಟೆ ಕಳುಹಿಸಿದ್ದೇನೆ. ಇನ್ನೇನು ಕಾದಿದೆಯೋ ನೋಡಬೇಕು.

ಚಿತ್ರ ಪ್ರದರ್ಶನ ನಡೆಯುತ್ತಿರುವಾಗ ಮುದುಕ ತನ್ನ ಸೀಟಿನಸುತ್ತ ಕೈ ತಡವಿ ಏನನ್ನೂ ಹುಡುಕ ಹತ್ತಿದ.

ಪಕ್ಕದ ಯುವಕ "ಏನ್ನನ್ನು ಹುಡುಕುತಿದ್ದೀರಿ ಯಜಮಾನರೇ"?

"ಒಂದು ಚುಯಿಂಗಂ ತುಂಡು" ಮುದುಕ ಹೇಳಿದ.

"ಸಿನಿಮಾ ನೋಡದೇ ಏಕೆ ಹಣ ಸಮಯ ಹಾಳು ಮಾಡುತ್ತೀರಿ" ಯುವಕ ಕೇಳಿದ.

"ಆದರೆ ನನ್ನ ಒಂದು ಹಲ್ಲು ಆದರ ಜೊತೆಗಿದೆ" ಮುದುಕ ಉತ್ತರಿಸಿದ ಕೆಳಗೆ ಕೈ ಆಡಿಸುತ್ತಾ.

ಡಾ॥ ಹೆಚ್. ವಿ. ಚಂದ್ರಶೇಖರ

ಗಡಿ ಬಿಡಿ

ಡಾ. ಹೆಚ್. ವಿ. ಮೂರ್ತಿ

ಹೊಸದಾಗಿ ಮದುವೆಯಾಗಿದ್ದ ಲೇಡಿ ಸರ್ಜನ್ ಆಪರೇಷನ್ ಮಾಡ್ತ ಇರಬೇಕಾದ್ರೆ "ನಿಮ್ಮ ಯಜಮಾನರು ಊರಿಗೆ ಬಂದೀದಾರಂತೆ. ಫೋನ್ ಬಂದಿದೆ" ಎಂದು ಆಯಾ ಆಕೆಗೆ ತಿಳಿಸಿದಳು. ಡಾಕ್ಟರಿಗೆ ಬೇಗ ಮನೆಗೆ ಹೋಗುವ ಅವಸರ. ಗಡಿಬಿಡೀಲಿ ಆಪರೇಷನ್ ಮುಗಿಸಿ ಸರಸರ ಮನೆಗೆ ಹೊರಟಳು. ಆಗಲೆ ರಸ್ತೆಗೆ ಇಳಿದಿದಾಳೆ. ಜನಾ ಎಲ್ಲಾ ಆಕೇನ ನೋಡಿ ನಗೋಕೆ ಆರಂಭಿಸಿದರು. ಹಿಂದೇ ಆಯಾ ಓಡಿ ಬಂದಳು. "ಅಮ್ಮಾತಲೆ ಕ್ಯಾಪು, ಮುಖದ ಬಟ್ಟೆ, ವೇಪ್ರಿನ್ ತೆಗೆದಿಲ್ಲಾ, ಈ ಅವಾಂತರದಲ್ಲೇ ಮನೆಗೆ ಹೋಗ್ತೀರಾ" ಅಂದಾಗಲೆ ಆಕೆಗೆ ಅರಿವಾಗಿದ್ದು.

ಒಬ್ಬ ರಸಿಕ ಮಹಾಶಯ ತನ್ನ ಹೆಂಡತಿಯನ್ನು ಸ್ಕೂಟರ್ ಮೇಲೆ ಕೂರಿಸಿ ಕೊಂಡು ಪೇಟೆಯಿಂದ ಮನೆಗೆ ಹೋಗಬೇಕಾಗಿತ್ತು. ಸ್ಕೂಟರ್ ಮೇಲೆ ತಾನುಕೂತು ಸ್ಟಾರ್ಟ್ ಮಾಡಿದ. ಹೆಂಡತಿ ಹತ್ತುವುದನ್ನು ಸಹ ನೋಡಿದ್ದಾ ತಾನೆ? ಇನ್ನೂ ಆಕೆ ಸರಿಯಾಗಿ ಕೂತಿಲ್ಲಾ. ಏನೋ ಗಡಿಬಿಡಿ. ಸ್ಕೂಟರ್ ಬಿಟ್ಟೇಬಿಟ್ಟ. ಪಾಪ! ಆಕೆ ಧಡೀರನೆ ಕೆಳಗೆ ಬಿದ್ದಳು. ಎದ್ದು 'ರೀ ರೀ' ಅಂತ ಕೂಗ್ತಾನೆ ಇದಾಳೆ. ಆತ "ರ್ಝುಂ" ಅಂತಾ ಹೋಗ್ತಾನೆ ಇದಾನೆ. ಮನೆ ತಲ್ಪಿ, ಸ್ಕೂಟರ್ ನಿಲ್ಸಿ, ಹಿಂದೆ ನೋಡಿದಾಗಲೇ ತೆಪರನಿಗೆ ವಿಷಯ ಅರಿವಾಗಿದ್ದು.

ಪರೀಕ್ಷೆಗೆ ಯದ್ವಾತದ್ವಾ ಲೇಟಾಗಿತ್ತು. ಸೋಮಾರಿ ಉದ್ದನಿ ಕಾಲು ಸಿದ್ದ ರಾಮು ಮನೆ ಹೊರಗೆ ಮುಂಚೇನೆ ಸಜ್ಜಾಗಿ ನಿಸಿಲ್ಲಿದ್ದ ಸೈಕಲ್ ಮೇಲೆ, ನಿಂತ ಹಾಗೆ ಒಂದು ಕಾಲು ಬೀಸಿ ಹಾಕಿ, ಏರಿದ. ಗಡಿಬಿಡೀಲಿ ಸರಸರ ಪೆಡಲ್ ಮಾಡಲಾಭಿರಂಸಿದು ಜೋರಾಗಿ ಹಿಂದಿನ ಚಕ್ರಾ ಏನೋ ಗಿಮಿಗಿಮಿತಿರಗೋದು. ಸೈಕಲ್ ಮಾತ್ರನಿಂತಲ್ಲೆ ವಾಲಾಡೋದು. ರೇಗಿತು 'ಥತ್' ಅಂತಾ ಒಂದು ಜರ್ಕ ಕೊಟ್ಟ. ಸ್ಟ್ಯಾಂಡ್ ಮುರಿದು ದಪ್ಪನೆ ಬಿದ್ದ. 'ಗಗಡ' ಸದ್ದುಮಾಡಿದ ಲಾಕಾದ ಸ್ಟ್ಯಾಂಡಿನ ಮೇಲೆ ನಿಂತಿದ್ದ ಸೈಕಲ್ಲಾ, ಸ್ಟ್ಯಾಂಡ್ ತಗೀದೆಏರಿದ್ದ!

ಒಂದು ಸ್ಕೂಲಿಗೆ ಒಂದು ಸಲ ಇನಸ್ಪೆಕ್ಟ್ರು ಅಕಸ್ಮಾತ್ ಭೇಟಿ ಇತ್ತರು. ಈ ಅಕಸ್ಮಾತ್ ಭೇಟಿಯ ಉದ್ದೇಶವೇನು ಎಂದು ಹೆಡ್ ಮಾಸ್ಟರ ಗಾಬರಿ

ಬಿದ್ದರು. ಧಡಧಡ·ಹೊರಟರು ಬಾಗಿಲಬಳಿ ಆಗಲೆ ಬಂದಿದ್ದ ಇನಸ್ಪೆಕ್ಟರನ್ನು ಸ್ವಾಗತಿಸಲು. ಗಡಿಬಿಡೀಲಿ ಅವರ ಪಂಚೆ ಕಚ್ಚೆ ಬಿಚ್ಚಿದ್ದೆ ಗೊತ್ತಾಗಲಿಲ್ಲ. ಇನಸ್ಪೆಕುಟ್ರು ಮೇಷ್ಟ್ರ ಅವತಾರ ನೋಡಿ ನೋಡಿ ನಕ್ಕು, "ಕಚ್ಚೆ ಭದ್ರ್ವಾಗಿರಬೇಕ್ರಿ ಮೇಷ್ಟ್ರೆ ಎಂದರು.

ಕನ್ಯಾ–ವರ ಸಂದರ್ಶನ. ಗಡಿಬಿಡೀಲಿ ವರ, ಒಂದು ಕಡೆ ಮೀಸೆ ನೀಟಾಗಿ ಬೋಳಿಸಿಕೊಂಡು ಇನ್ನೊಂದು ಕಡೆ ಹಾಗೆ ಬಿಟ್‌ಕೊಂಡು ಬಂದು ಕೂತಿದ್ದ ನಗೆ ಪಾಟಲಾಗಿ.

ಒಮ್ಮೆ ಹಾಸ್ಯ ಸಾಹಿತಿ ಮೂಡಾನ ಅದೃಷ್ಟ ಖುಲಾಯಿಸಿತು. 'ಅಂತರಂಗ' ಪತ್ರಿಕೆಯವರು ಓದುಗರ ಅಪೇಕ್ಷೆಯಂತೆ ಆತನಿಗೆ ಬಹಿರಂಗ ಸಾರ್ವಜನಿಕ ಸನ್ಮಾನ ಏರ್ಪಡಿಸಿದರು, ಮೂಡಾ ಕೇವಲ ಬಡ ಸಾಹಿತಿ. ಅವನ ಬಳಿ ಸಮಾರಂಭಗಳಿಗೆ ಯೋಗ್ಯವಾದ ಬಟ್ಟೆ–ಬರಿ ಎಲ್ಲಿಬರಬೇಕು ? ಒಂದು ಜೂಲಂಗಿ, ಒಂದು ಧೋತ್ರ ಬಿಟ್ಟು, ಮರುಕದಿಂದ ಆಸ ಪಾಸಿನ ಒಬ್ಬಶಿವ ಒಂದುಕೋಟು, ಇನ್ನೊಬ್ಬ ಸೊಗಸಾದ ಮೈಸೂರು ಜರೀಪೇಟ ಸುತ್ತಿದ್ದು, ಮಗದೊಬ್ಬ ಒಂದು ಗಂಜಿ ಪಂಚೆ, ನಾಕನೆ ಅವನು ಒಂದು ವಾಕಿಂಗ್ ಸ್ಟಿಕ್‌ಕೊಟ್ಟರು. ನೀಟಾಗಿ [ಶೃಂಗಾರ ಮಾಡಿ ಕೊಂಡು ಹೋಗ್ಲಿ ಅಂತ ಅವರ ಆಸೆ. ಖುಷೀಲಿ ಮೂಡಾ ಅವತ್ತು ಗಡದ್ದಾಗಿ ನಿದ್ದೆ ಹೊಡೆದ ಇಡೀ ಮದಾ ಹ್ನಾ ಎಲ್ಲಾ. ಏಳೋ ಹೊತ್ತಿಗೆ ಸನ್ಮಾನದ ಸಮಯ ಸಮೀಪಿಸಿತ್ತು. ಗಡಿಬಿಡೀಲಿ ಅಡ್ಡಾದಿಡ್ಡಿ ಕೋಟು ತೊಟ್ಟು, ಅಡರಾ ಬಡರಾ ಪಂಚೆ ಉಟ್ಟು, ಪೇಟಾನ ತಲೆಗೆ ಚಪ್ಪಲಿಗಳನ್ನ ಕಾಲುಗಳಿಗೆ ಸಿಗಿಸಿಕೊಂಡು ವಾಕಿಂಗ್ ಸ್ಟಿಕ್ ಹಿಡಿದು ಧಡಾ ಧಡಾ ಹೊರಟ.

ಭರಂದ್ ಸಭೆ ಸೇರಿತು, ಜನಾ ಕಾದುಕೂತಿದ್ದರು. ಶ್ರೀಮಾನ್ ಮೂಡಾರ ವರು ಇನ್ನೂ ಪತ್ತೆ ಇಲ್ಲವಲ್ಲಾ ಅಂತಾ ವ್ಯವಸ್ಥಾಪಕರು ವದ್ದಾಡ್ತಾಇರಬೇಕಾದ್ರೆ ಸಭೇಲಿ ಇದ್ದಕ್ಕಿದ್ದ ಹಾಗೆ ಗೊಂದಲ ! "ಯಾರೋ ಕೊಡಂಗಿ" ಅಂತಾ ಒಬ್ಬನು ಅಂದ. "ಹುಚ್ಚಾ ಇರಬೇಕಲ ದಬ್ಬರೋ ಅವನ್ನ" ಅಂತಾ ಅಂದಾ ಇನ್ನೊಬ್ಬ. ಅಷ್ಟರಲ್ಲಿ ಕಾರ್ಯದರ್ಶಿ ಕಚಗುಳ್ಳಿ ಆನಂದಮ್ಮ ಗೊಂದಲವೇನು ಅಂತಾ ಸ್ಥಳಕ್ಕೆ ಧಾವಿಸಿದರು. ಜನಾ ದಬ್ಬ ಬೇಕೂ ಂತಿದ್ದ ಅವ್ಯಕ್ತೀನೇ ಶ್ರೀಮಾನ್ ಮೂಡಾರ ವರು ಎಂದು ಗುರ್ತಿಸಿದರು. ಗಡಿಬಿಡೀಲಿ ಆತ ಪೇಟಾ ಹಿಂದೆ–ಮುಂದೆ ಇಟ್ಟಿದ್ದ. ಕೋಟೂ ಅಷ್ಟೆ, ಹಿಂದೆ ಮುಂದೆ ಹಾಕಿದ್ದ ಒಳಗಿನ ಲೈನಿಂಗ್ ಎದ್ದುಕಾಣುವಂತೆ ಮೇಲೆ ಮಾಡಿ. ಎಡಕಾಲಿನ ಚಪ್ಪಲಿ ಬಲಗಾಲಿಂದು ಎಡಗಾಲಿಗೆ ಹಾಕಿದ್ದ.

ಕೋಲು ಹಿಡಿ ಕೆಳಗೆ ಮಾಡಿ ಹಿಡಿದಿದ್ದ, ಮೊದಲೆ ಮಂಗೇಶರಾಯು ಮೇಲಿನ ಕಲಿ ಶ್ಯಾಮನಂತೆ ಈ ಅವತಾರಬೇರೆ ! ಕಚಗಂಳ್ಳಿಯುವರು ಮೂಡಾರವರನ್ನು ವೇದಿಕೆಯು ಮೇಲೆ ಕರೆದೊಯ್ದರು. ಪೇಟಾ ಸರಿ ಮಾಡಿದರು, ಕೋಟು ಸರಿಯಾಗಿ ಹಾಕೋಣ ಅಂತ ಬಿಚ್ಚಿದರೆ ಒಳಗೆ ಜೂಲು ಜೂಲು ಅಂಗಿ ! ನೋಡಿ ಎಲ್ಲಾ ಘೊಳ್ಳೆಂದು ನಕ್ಕರು. ಎಲ್ಲಾ ಸರಿ ಪಡಿಸಿದ ಮೇಲೆ ಸನ್ಮಾನ ನಡೆಯುಲಾರಂಭಿಸಿತು. ಸಾಹಿತಿಯು ಕೊರಳಿಗೆ ಹಾರದ ಮೇಲೆ ಹಾರ ಬಿದ್ದವು. ಯಾರೋ ಒಬ್ಬ ಪುಣಾತ್ಮ ಮೂಲೆಯಿಂದ ವದರಿದ 'ಏ...... ಬಡ ಸಾಹಿತಿಗೆ ಹಾರ ಅಲಪ್ಪ ಬೇಕಾದ್ದು.........ಆಹಾರ.........ಒಟ್ಟೆ......... ನೋಡಿ ನಿಮ್ಮ ಸಾಹಿತಿ ಬರದಾಗಿನ ಹೆಣಾ ಆಗೀದಾನೆ' ಎಂದು. ಸಾಹಿತಿ ಗತಿ ಅದೇ ತಾನೆ ?

(ಆಲ್ ಇಂಡಿಯಾ ರೇಡಿಯೋ ಭದ್ರಾವತಿ ಕೃಪೆ.)

ವಿಂಟೇಜ್ ರಾಶಿ

(ರಾಶಿಯವರ 'ತುಟಿ ಮೀರಿದುದು' ಸಂಗ್ರಹದಿಂದ)

ಚೆಲುವನ ಚೆನ್ನ

ನಮ್ಮೂರಿನಲ್ಲಿ ಚೆಲುವನ ಹೆಸರನ್ನು ಕೇಳದೆ ಇದ್ದ ಹುಡುಗರೇ ಇಲ್ಲ. ಅವನು ಹುಡುಗರಿಗೆಲ್ಲಾ ಅಷ್ಟು ಬೇಕಾದವನಾಗಿದ್ದವನು. ಅವನು ಡೊಂಬರ ವನು. ತನ್ನ ಹೆಂಡತಿ ಮಕ್ಕಳೊಡನೆ ಊರಿನ ಚೌಕಿಗಳಲ್ಲೆಲ್ಲಾ ಗಣೆಕಟ್ಟಿ ಆಟವಾಡಿ ಹೊಟ್ಟೆ ಹೊರೆದುಕೊಳ್ಳುತ್ತಿದ್ದನು. ಅವನ ಮಗನೇ ಚೆನ್ನ. ಚೆನ್ನನಿಗೆ ಆರು ವರ್ಷ ಆಗಿರಬಹುದು. ಆ ಗಣೆಯ ಮೇಲೇರಿ ಹೊಟ್ಟೆಯ ಮೇಲೆ ಮಲಗಿ ಕೊಂಡು ಸರ್‍ರನೆ ತಿರುಗುತ್ತಿದ್ದನು. ನಮಗೆಲ್ಲಾ ಅವನನ್ನು ನೋಡಿದರೆ ನಾವೂ ಅವನಂತೆ ಈ ಆಟಪಾಟಗಳನ್ನಾಡಲು ಕಲಿತರೆ ಬಲು ಚೆನ್ನು ಎನಿಸುತ್ತಿದ್ದಿತು. ಕೆಲವು ವರ್ಷಗಲ್ಲೇ ಈ ಚೆನ್ನನು ಬಲು ವಿಧವಾದ ಚಮತ್ಕಾರದ ಐಂದ್ರಜಾಲಿಕ ಆಟಗಳನ್ನು ಕಲಿತುಕೊಂಡನು. ಇಸ್ಪೀಟುಗಳ ಎಲೆಗಳನ್ನು ಹರಿದು ಬೇಕಾದ ಎಲೆಯು ತೆಂಗಿನ ಮರದಿಂದ ಬರುವಂತೆ ಮಾಡುವುದು. ಹುಡುಗಿಯನ್ನು ಬುಟ್ಟಿಯಲ್ಲಿಟ್ಟು, ಮುಚಳವನ್ನು ಮುಚ್ಚಿ ಕತ್ತಿಯಿಂದ ಆ ಬುಟ್ಟಿಯನ್ನು ತಿವಿಯು ವುದು; ಸ್ವಲ್ಪ ಹೊತ್ತಿನ ಮೇಲೆ ಜನಸಂದಣಿಯಿಂದ ಆ ಹುಡುಗಿಯು 'ಓ ಚೆನ್ನ ಬಂದೇ ಬಂದೇ, ಎಂದು ಕೂಗಿಕೊಂಡು ಇವನ ಬಳಿ ಬರುವುದು. ಇತ್ಯಾದಿಯಾದ ಆ ವಿಧ್ಯೆಗಳಲ್ಲಿ ಅಸಾಧಾರಣ ಪಾಂಡಿತ್ಯವನ್ನು ಪಡೆದನು. ಇವೆಲ್ಲಾ ಹುಡುಗ ನಾಗಿದ್ದಾಗ ನಾನು ನೋಡಿದುದಾದುದರಿಂದ ಅಚ್ಚಳಿಯದಂತೆ ನೆನಪು ನಿಂತಿದೆ.

ಸಂಕ್ರಾಂತಿಯ ಹಿಂದಿನ ದಿನ ಸಂತೆಗೆ ಹೋಗಿದ್ದೆ. ಅಲ್ಲಿ ಕಬ್ಬಿನ ಜಲ್ಲೆಗಳನ್ನೂ ಮಿಕ್ಕ ಸಾಮಾನುಗಳನ್ನೂ ಕೊಂಡುಕೊಂಡು ಬೇಗ ಮನೆಗೆ ಸರಸರನೆ ನಡೆಯ ಲಾರಂಭಿಸಿದ್ದೆ. ಕಂಕುಳಲ್ಲಿ ಕಬ್ಬಿನ ಜಲ್ಲೆ ಕೈಯಲ್ಲಿ ಸಾಮಾನು ಗಂಟು ; ಮನಸ್ಸಿನಲ್ಲಿ ಮನೆಯಿಲ್ಲಿರುವ ಆರು ಮಕ್ಕಳ ಗೊಂದಲ. ಮೂರನ್ನೂ ಹೊತ್ತುಕೊಂಡು ವೇಗ ವಾಗಿ ನಡೆಯಲಾರಂಭಿಸಿದ್ದೆ. ಸಂತೆಯ ಸಂದಣಿಯು ಬಹುವಾಗಿದ್ದುದರಿಂದ ಬಹಳ ಬೇಗ ನಡೆಯಲು ಅಡಚಣೆಯಾಗಿತ್ತು. ಆದರೂ ಕಷ್ಟಪಟ್ಟು ಮುನ್ನುಗ್ಗುತ್ತಿದೆ. ಸ್ವಲ್ಪ ದೂರ ಹೋಗುವುದರೊಳಗೇ ಯಾರೋ ಒಬ್ಬರು ಹಸುವೊಂದನ್ನು ಹೊಡೆದರು. ಅದು ನನ್ನ ಬಳಿಗೇ ಬರುವಂತೆ ತೋರಿತು. ನಾನೂ ಹಿಂದೆ ಮುಂದೆ ನೋಡದೆ ಹಿಂದಕ್ಕೆ ಸರಿದೆ. ತಕ್ಷಣ ಯಾರೊ 'ಅಯ್ಯೊ!' ಎಂದಂತಾ

ಯಿತು. ಓಂತಿರುಗಿದರೆ ಯಾರ ಕಣ್ಣಿಗೊ ನನ್ನ ಜಲ್ಲೆಯು ತಗುಲಿತು. ಆತನು ಕಣ್ಣೊಳಿಗೆ ತನ್ನ ವಸ್ತ್ರವನ್ನು ಒತ್ತಿದ್ದನು. ವಸ್ತ್ರವೆಲ್ಲಾ ರಕ್ತಮಯವಾಗಿತ್ತು. ಅಯ್ಯಾ, ನನ್ನ ಅಪರಾಧ, ಹಸುವಿಗೆ ಬೆದರಿ ನಿನ್ನ ಇರುವಿಕೆಯನ್ನು ಕಾಣದೆ, ಸರಿದೆ. ಬಹಳ ಪೆಟ್ಟಾಯಿತೇ?' ಎಂದೆ. 'ಏನ್ರೀ, ಹೀಗೆ ಕೇಳುತ್ತೀರಿ! ನಾಚಿಕೆಯಾ ಗುವುದಿಲ್ಲವೆ? ಧಾಂಡಿಗರಾಗಿದ್ದುಕೊಂಡು ಆ ಕಂಚಿ ಹಸುವಿಗೆ ಹೆದರಿದೆ ಎಂದು ಹೇಳುತ್ತೀರಿ? ನನ್ನ ಕಣ್ಣು ಹಾಳುಮಾಡಿದರಲ್ಲ! ಆಗಲಿ, ನಿಮಗೆ ಇಷ್ಟರಲೇ ನನ್ನ ಪರಿಚಯ ಮಾಡಿಸಿಕೊಡುತ್ತೇನೆ, ಎಂದು ರೇಗುತ್ತ ಹೇಳಿದ. ಆ ವೇಳೆಗೆ ಇನ್ನೊಬ್ಬ ಆಗಂತಕನು ಹತ್ತಿರ ಬಂದ. ಬಂದವನೇ ನನ್ನನ್ನು ಛುಡಾಯಿಸಲು ಶುರು ಮಾಡಿದ. 'ಅಲ್ರೀ, ಜ್ಞಾನ ಇಲ್ಲವೇನ್ರೀ ನಿಮಗೆ? ಸಂತೆ ಬೀದಿಯಲ್ಲಿ ಹಿಂದೆ ಮುಂದೆ ನೋಡದೆ ನಗ್ತುತ್ತೀರಲ್ಲ. ಪಾಪ! ದೇವರೇ ಎಂದು ಆತ ಬರುತ್ತಿದ್ದರೆ ಅವನ ಕಣ್ಣನ್ನೇ ಇಂಗಿಸತೊಡಗಿದ್ದಿರಲ್ಲ. ನಿಮಗೆಲ್ಲಾ ನ್ಯಾಯ ಸ್ಥಾನದಲ್ಲಿ ಚೆನ್ನಾಗಿ ಶಿಕ್ಷೆಯಾಗಬೇಕ್ರೀ, ಎಂದ. ಆಮೇಲೆ ಪೆಟ್ಟು ತಿಂದವನ ಕಡೆಗೆ ತಿರುಗಿ ಹೇಳಿದ: 'ಸ್ವಾಮಿ! ನೀವೇನಾದರೂ ಕೋರ್ಟಿಗೆ ಹೋಗುವು ದಾದರೆ ನನ್ನ ಸಾಕ್ಷ್ಯವನ್ನು ಹೇಳಲು ಯಾವಾಗಲೂ ನಾನು ಸಿದ್ಧನಾಗಿದ್ದೇನೆ. ನನ್ನ ಕಡೆ ದುರುಗುಟ್ಟುತ್ತ ನೋಡಿ 'ಈ ಅನ್ಯಾಯಕಾರರನ್ನು ನ್ಯಾಯವಾದ ಶಿಕ್ಷೆಗೆ ಗುರಿಮಾಡಲು ನನಗೆ ಬಹಳೇ ಸಂತೋಷ. ಎಂದ, ನಾನೂ ಯೋಚಿಸ ಲಾರಂಭಿಸಿದೆ. ಇನ್ನು ಕೋರ್ಟು ಕಛೇರಿ ಅಲೆಯಲಾರಂಭಿಸಿ ಹಣ, ದಿನ ಎಲ್ಲಾ ಕಳೆದುಕೊಂಡು ಕಡೆಗೆ ಅವನಂತೆಯೇ ತೀರ್ಪಾದರೆ ದಂಡವನ್ನೂ ಕೊಡಬೇಕಾ ಗುತ್ತದೆ. ಈ ಮಧ್ಯೆ ಅವನ ಕಣ್ಣೇನಾದರೂ ಹೋಗಿಬಿಟ್ಟಿದರೆ ದಂಡವೂ ಹೆಚ್ಚಾಗುತ್ತದೆ. ಇವೆಲ್ಲವನ್ನೂ ತಪ್ಪಿಸಿಕೊಳ್ಳಲು ಈಗಲೇ ಏನಾದರೂ ಪ್ರಯತ್ನ ಮಾಡಬೇಕು. ತಪ್ಪು ನನ್ನದೇನೊ ದಿಟ. ಹಿಂದು ಮುಂದು ನೋಡದೆ ಸಂತೆಯ ಬೀದಿಯಲ್ಲಿ ನಾನು ಕಬ್ಬಿನ ಜಲ್ಲೆಯನ್ನು ಕಂಕುಳಲ್ಲಿಟ್ಟುಕೊಂಡು ಹೋದುದು ನನ್ನ ತಪ್ಪು. ಈಗಲಾದರೂ ಇವರಿಬ್ಬರಿಗೂ ಐದೈದು ರೂಪಾಯಿನ ನೋಟನ್ನು ಯಾರಿಗೂ ಕಾಣದಂತೆ ಕೊಟ್ಟು ಈ ಗೋಜಿನಿಂದ ಪಾರಾಗೋಣ, ಎಂದು ನಿರ್ಧರಿಸಿ ಕಿಸೆಯ ಒಳಕ್ಕೆ ಕೈಹಾಕಿದೆ. ಇಬ್ಬರೂ ನನ್ನನೇ ತುದಿಗಣ್ಣಿಂದ ನೋಡುತ್ತಿದ್ದರೆಂಬುದೂ ತಿಳಿಯಿತು. ಆ ವೇಳೆಗೆ ದೂರದಿಂದ ಇನ್ನೊಬ್ಬ ಮಹರಾಯನು ಬಂದ. ಅಯ್ಯೋ ದೇವರೇ! ಹದಿನೈದು ರೂಪಾಯಿಗೆ ಬಂತಲ್ಲಾ! ಎಂದುಕೊಳ್ಳುವಷ್ಟರಲ್ಲಿ ಅವನು ಮಾತನಾಡಿದ 'ಸ್ವಾಮಿ, ಇವರ ಕಥೆಯನ್ನು ನಂಬಬೇಡಿ ನೀವು ಹಿಂದಕ್ಕೆ ಸರಿದಾಗ ಆತ ನಿಮಗೆ ಆರು ಅಡಿ ಹಿಂದೆ ನಿಂತಿದ್ದ. ನಿಮ್ಮ ಕಬ್ಬಿನ ಜಲ್ಲೆಯು ಇವನಿಗೆ ತಾಕಲೇ ಇಲ್ಲ. ಅವನು ಕೋರ್ಟಿಗೆ ಹೋದರೆ ಹೋಗಲಿ. ನಾನು ನಿಮ್ಮ ಪರವಾಗಿ ಸಾಕ್ಷ್ಯ ಕೊಡುತ್ತೇನೆ, ಎಂದ.

ನನಗೆ ಸ್ವಲ್ಪ ಧೈರ್ಯ ಬಂತು. ಆ ವೇಳೆಗೆ ಪೆಟ್ಟು ತಿಂದವನ ಕಣ್ಣುಗಳೂ ಸರಿ ಹೋದಂತೆ ಕಂಡಿತು. ಏಕೆಂದರೆ ವಸ್ತ್ರವನ್ನು ತೆಗೆದಿದ್ದನು. ಕಣ್ಣುಗಳು ಚೆನ್ನಾಗಿಯೇ ಇದ್ದವು. 'ಹೋಗಲಿ ಬಿಡ್ರೀ ನೀವು ನಿಮ್ಮ ಪಾಡಿಗೆ ಹೋಗಿರಿ, ಎಂದು ಪೆಟ್ಟು ತಿಂದವನೇ ಹೇಳಿದ. ನನಗೆ ಆಶ್ಚರ್ಯ, ವಿಸ್ಮಯ ಸಂಶಯ, ಅನುಮಾನ, ಕ್ರೌರ್ಯ, ಇತಾದಿಗಳೆಲ್ಲವೂ ಒಟ್ಟಿಗೇ ಉಂಟಾಯಿತು. ಸ್ವಲ್ಪ ಹೊತ್ತು ಮೌನವಾಗಿದ್ದೆ. ನಂತರ ಹೇಳಿದೆ. 'ಆದದ್ದು ಆಗಿಹೋಯಿತು. ಆದರೆ ನಿನ್ನ ಮನಸ್ಸಿನಲ್ಲಿ ಏನಿತ್ತಯ್ಯಾ ಹೀಗೆ ಮಾಡಲು ? ಅದನ್ನು ಹೇಳಿದರೆ ನಾನೂ ಇದನ್ನೆಲ್ಲಾ ಮರೆತುಬಿಡುತ್ತೇನೆ' ಎಂದೆ. ಎಲ್ಲರ ಹತ್ತಿರವೇ ಇದ್ದ ಒಂದು ಎಳನೀರಿನ ಅಂಗಡಿಯ ಬಳಿ ಹೋಗಿ ಎಳನೀರು ಕುಡಿದು ಗರುಕೆಯ ಮೇಲೆ ಕೂತು ಕೊಂಡವು. ಆಗ ಪೆಟ್ಟು ತಿಂದವನು. ತನ್ನ ಪ್ರವರನ್ನೆಲ್ಲಾ ಹೇಳಿದ : "ನೋಡ್ರಿ, ನಾನು ಒಬ್ಬ ಡೊಂಬರವನ ಮಗ. ನನ್ನ ಹೆಸರು ಚೆನ್ನ. ನನ್ನ ತಂದೆಯ ಹೆಸರು ಚೆಲುವ. ನಾನು ಡೊಂಬರಾಟದಲ್ಲಿ ಐಂದ್ರಜಾಲಿಕ ಚಮತ್ಕಾರಗಳಲ್ಲಿ ಚೆನ್ನಾಗಿ ನುರಿ ತಿದ್ದೆ. ತಕ್ಕಮಟ್ಟಿಗೆ ಹೆಸರುವಾಸಿಯಾಗಿದ್ದೆ. ಊರೂರು ತಿರುಗಿ ದಾರಿಯ ಚೌಕ ಗಳಲ್ಲೆಲ್ಲಾ ಆಟ ಕಟ್ಟಿ ತಕ್ಕಮಟ್ಟಿಗೆ ಸುಖವಾಗಿಯೇ ಹೊಟ್ಟೆ ಹೊರೆದುಕೊಳ್ಳು ತ್ತಿದ್ದೆ. ಆದರೆ ಈಗ್ಗೆ ಕೆಲವು ವರ್ಷಗಳಿಂದಲೂ ಜನರೆಲ್ಲರೂ ಪರದೇಶದಿಂದ ಬಂದು ಬಾ ಂಡು, ಹುಡುಗಿಯರನ್ನು ಮುಂದಿಟ್ಟು ಸರ್ಕಸ್ ಎಂದು 'ಸಂಸ್ಥೆಗಳನ್ನು ಮಾಡಿ ಕೊಂಡು ಆಟ ಹೊಡಿದರೆ ಹಣ ಕೊಡುವರೇ ವಿನಹಾ ನನ್ನಂಥ ಏಕಸಂಸಾರ ಆಟ ಗಾರರಿಗೆ ಉತ್ತೇಜನವೇ ಇಲ್ಲದಂತಾಯಿತು. ಕಡೆಕಡೆಗೆ ಊಟ ಸಿಗುವುದೇ ಕಷ್ಟವಾ ಯಿತು, ಹಲವು ಪರದೇಶೀ ಸರ್ಕಸ್ ಸಂಸ್ಥೆಗಳು 'ಹದಿನೈದು ರೂಪಾಯಿ ಪಗಾರ ಕೊಡುತ್ತೇವೆ ನೀನು ನಮ್ಮಲ್ಲಿ ಕೆಲಸಕ್ಕೆ ಬಂದರೆ, ಎಂದರು. ಸ್ವತಂತ್ರ ಜೀವದರುಚಿ ಗಂಡ ನಾನು ಅವರ ಕೆಲಸಕ್ಕೆ ಒಪ್ಪಲಿಲ್ಲ. ಊಟದ ನಿಮಿತ್ತ ಬಹುವಾಗಿ ಯೋಚಿ ಸಬೇಕಾಯಿತು. ಆ ಹೊತ್ತಿಗೆ ನನ್ನ ಗೆಳೆಯ ನನಗೆ ಸಾಕ್ಷ್ಯ ಹೇಳುವುದಾಗಿ ಬಂದವನು ನನಗೆ ಸಂಧಿಸಿದ. ಇಬ್ಬರೂ ಸೇರಿ ಆಗ ಒಂದು ಉಪಾಯಹೂಡಿ ದ್ದೇವೆ. ನಿಮಗಾದಂತೆ ನಾನು ಹಿಂದೆ ಇದ್ದು ಪೆಟ್ಟು ತಿಂದಂತೆ ನಟಿಸುತ್ತೇನೆ. ನನ್ನ ಅನುಯಾಯಿಯು ಬಂದು ನನಗೆ ಸಾಕ್ಷ್ಯ ಹೇಳುವುದಾಗಿ ನೆರವಾಗುತ್ತಾನೆ. ಆಗ್ಗೆ ನಿಮ್ಮಂತಹರು ಐದೋ ಹತ್ತೊ ರೂಪಾಯಿ ಕೊಟ್ಟು ಹೊರಟುಹೋಗು ವರು. ಕೆಲವು ವೇಳೆ ಕಬ್ಬಿನ ಜಲ್ಲೆಯ ಪೆಟ್ಟು ತಿಂದಂತೆ ನಟಿಸುತ್ತೇವೆ. ಕೆಲವು ವೇಳೆ ಷಹರಿನ ರೈಲ್ವೆ ಸ್ಟೇಷನ್ನಿಗೆ ಹೋಗಿ ಬಾಳೆಹಣ್ಣು ತಿನ್ನುತ್ತಿದ್ದವರ ಹಿಂದೆ ನಡೆದು ಅವರು ಸಿಪ್ಪೆ ಎಸೆದ ವೇಳೆಗೆ ಅದರ ಮೇಲೆ ಅಡಿಯಿಟ್ಟು ಜಾರಿಬಿದ್ದವ ನಂತೆ ನಟಿಸಿ, ಅವನನ್ನು ಠಾಣೆಗೆ ಎಳೆಯುತ್ತೇವೆಂದು ಹೆದರಿಸಿ, ಅವನು ದಂಡ ವನ್ನು ಯಾರಿಗೂ ತಿಳಿಯದಂತೆ ತೆರುವಂತೆ ಮಾಡುತ್ತೇವೆ. ಇನ್ನು ಕೆಲವು

ವೇಳೆ ಷಹರಿನ ಹೋಟೆಲುಗಳಿಗೆ ಹೋಗಿ ಕಡಪಾಕಲ್ಲಿನ ಮೇಲೆ ಬೆಣ್ಣೆಯನ್ನು ಹಾಕಿ,ಹೋಟೆಲಿನವರೇ ಹಾಕಿದ್ದರೆಂದೂ ನಾನು ಅದನ್ನು ಜಾರಿ ಬಿದ್ದ ಹಾಗೂ ನಟಿಸಿ ಅವರಿಂದ ದಂಡ ವಸೂಲ್ಮಾಡಿಕೊಂಡು ಬರುತ್ತೇನೆ. ಮಳೆಗಾಲದಲ್ಲಿ ಛತ್ರಿಯ ನೆಪದಿಂದಲೂ ಸಂಕ್ರಾಂತಿಯ ವೇಳೆಯಲ್ಲಿ ಕಬ್ಬಿನ ಜಲ್ಲೆಗಳಿಂದಲೂ ಬಾಳೇಹಣ್ಣಿನ ಸಿಪ್ಪೆಯಿಂದಲೂ ಮನೆ ಕಟ್ಟುತ್ತಿದ್ದಾಗ ನನ್ನ ಕಾಲಮೇಲೇ ಇಟ್ಟಿಗೆಯು ಬಿದ್ದಂತೆ ನಟಿಸುತ್ತಲೂ ಹೀಗೆ ವಿಧವಿಧವಾಗಿ ಕೆಲಸ ಮಾಡಿ ಹೊಟ್ಟೆ ಹೊರೆಯುತ್ತಿದ್ದೇನೆ, ಎಂದು ಹೇಳಿದ.

'ಅಯ್ಯಾ ಚೆನ್ನ ನಿನ್ನ ನೆನಪು ನನಗೆ ಚೆನ್ನಾಗಿದೆ. ನೀನು ಈ ಕೆಲಸ ಮಾಡು ವಾಗ ತಿಳಿಯದವರನ್ನ ಮೋಸಗೊಳಿಸುತ್ತೇನೆ ಎಂಬ ಭಾವನೆಯು ಮೂಡುವುದೇ? ಇಲ್ಲವೇ ?' ಎಂದು ಕೇಳಿದೆ.

ಅವನು ಹೇಳಿದ 'ಅದು ಯಾಕ್ರೀ ಆ ಭಾವನೆ. ನಾನು ಇದೊಂದು ಕಲೆ ಯೆಂದು ತಿಳಿದಿದ್ದೇನೆ. ನನ್ನ ಕಲೆಯನ್ನು ನಾನು ಉಚಿತ ರೀತಿಯಲ್ಲಿ ನಡೆಸಿದರೆ ಹಣ ಪಡೆಯುತ್ತೇನೆ. ಚೆನ್ನಾಗಿರುವ ಪಟವೊಂದನ್ನು ಯಾರಾದರೂ ಬರೆದರೆ ಅವರಿಗೆಷ್ಟು ಖರ್ಚಾಗುತ್ತೆ, ಸುಮಾರು ಒಂದು ರೂಪಾಯಿನಷ್ಟು ಬಣ್ಣ. ಅದನ್ನು ಮೆಚ್ಚಿದವರು ಅದಕ್ಕೆ ಸಾವಿರಾರು ರೂಪಾಯಿ ಕೊಡುವುದಿಲ್ಲವೇ? ಒಳ್ಳೆಯ ಪದ್ಯವೊಂದನ್ನು ಬರೆದ ಪುಣ್ಯದಿಂದ ಎಷ್ಟೋ ಜನ ಯುವಕ ಕವಿಗಳಿಗೆ ಸುಖ ಜೀವನದ ಸರಕಾರಿ ಕೆಲಸಗಳು ದೊರಕುವುದಿಲ್ಲವೇ? ಅವೆಲ್ಲವೂ ಮೋಸವೇ ಹಾಗೆಯೇ ನಾನೂ ಒಬ್ಬ ಕಲೋಪಾಸಕ. ಕಲೆಯ ಅಭ್ಯಾಸದಲ್ಲಿ ಚೆನ್ನಾಗಿ ತೇರ್ಗಡೆಯಾಗದಿದ್ದರೆ ಅಂದೇ ಹಣದ ಆಶೆಯನ್ನು ಬಿಟ್ಟು ಎಲ್ಲಾದರೂ ಸಾಮಾನು ಮಾರಿಕೊಂಡು ಜೀವನ ಮಾಡುತ್ತೇನೆ.

ಅವನ ಮಾತುಗಳು ನನಗೇಕೊ ಸಮಂಜಸವಾಗಿ ತೋರಿತು. ಅವನ ನ್ಯಾಯವೂ ನನಗೆ ಸಮ್ಮತವಾಯಿತು. ಪೂರ್ವಪರಿಚಿತನ ದರ್ಶನವಾಗಿದ್ದಕ್ಕೆ ಅವನನ್ನು ವಂದಿಸಿ ನನ್ನ ಮಾರ್ಗವನ್ನು ನಾನು ಹಿಡಿದೆ. ಮನೆಗೆ ಹೋಗಿ ಮಕ್ಕಳಿಗೆಲ್ಲಾ ಇದನ್ನು ಹೇಳಿದರೆ, ಯಾರೂ ನಂಬುವುದಿಲ್ಲವೆಂಬುದನ್ನು ಕಂಡು, ಯಾರಿಗೂ ನಾನು ಹೇಳಲಿಲ್ಲ,

ಇದಾದ ಎಷ್ಟೋ ತಿಂಗಳ ಮೇಲೆ ನಾನು ಷಹರಿಗೆ ಕಾರ್ಯಾಂತರವಾಗಿ ಹೋಗಿದ್ದೆ. ಅಲ್ಲಿ ಒಂದು ಸಾಯಂಕಲ ಮಾರ್ಕೆಟ್ಟಿನಿಂದ ಹಿಂತಿರುಗಿ ನನ್ನ

ಕೊಠಡಿಗೆ ಬರುತ್ತಿದ್ದಾಗ ದಾರಿಯಲ್ಲೊಬ್ಬನು ಹೂವು ಮಾರುತ್ತಿದ್ದನು. ಅವನನ್ನು ನೋಡಿದ ಹಾಗೆ ಜ್ಞಾಪಕ. ಅವನನ್ನು ಕರೆದು ಒಂದು ಕುಚ್ಚು ಹೂವು ಕೊಡೆಂದು ಕೇಳಿದೆ. ಅವನದನ್ನು ಸರಿಪಡಿಸುತ್ತಿದ್ದಾಗ ಅವನನ್ನು ಕೇಳಿದೆ, ನಿನ್ನನ್ನು ಎಲ್ಲೋ ನೋಡಿದಂತಿದೆ. ನೀನು ಯಾರು ?' ಎಂದು. ಅವನು ಹೇಳಿದ. 'ನಾನು ಚೆಲುವನ ಚೆನ್ನ ಸ್ವಾಮಿ, ನಿಮ್ಮನ್ನು ಸಂತೆಯಲ್ಲಿ ಒಮ್ಮೆ ನೋಡಿದ್ದೆನಲ್ಲವೇ ?' ಎಂದ. ನನಗೂ ಜ್ಞಾಪಕ ಬಂತು. ಅವನನ್ನು ಕೇಳಿದೆ, 'ಅಯ್ಯೋ ಚೆನ್ನ, ಇದೇನಿದು! ನಿನ್ನ ಕಲೆಯನ್ನು ಮರೆತುಬಿಟ್ಟೆಯಾ? ಅಥವಾ ಅದರಿಂದ ಕೇಡೇನಾದರೂ ಸಂಭವಿಸಿತೇ? ಹಾದಿಯಲ್ಲಿ ಹೂವು ಮಾರುವ ಸ್ಥಿತಿಗೆ ಬಂದಿರುವೆಯಲ್ಲ!' ಎಂದೆ. ಆಗವನು ಹೇಳಲಾರಂಭಿಸಿದ. 'ನೋಡಿ, ನಿಮ್ಮನ್ನು ನೋಡಿದ ಮೇಲೆ ಹಳ್ಳಿಗಳಲ್ಲಿ ನನ್ನ ಕಲೆಯನ್ನು ಅಭ್ಯಸಿಸುವುದು ಅಷ್ಟು ಫಲ ಕಾರಿಯಲ್ಲ ಎಂದು ನಾವಿಬ್ಬರೂ ಷಹರಿಗೆ ಬಂದು ಅಭ್ಯಸಿಸತೊಡಗಿದೆವು. ಇಲ್ಲಿ ದಂಡವೆಂದರೆ ನೂರು ಇನ್ನೂರು ರೂಪಾಯಿಗಳು ದೊರೆಯಲಾರಂಭವಾಯಿತು.

ಆದರೆ ಒಂದು ದಿನ ಸಾಹುಕಾರ----..........ಯ್ಯನವರು ಮನೆ ಕಟ್ಟಿಸುತ್ತಿದ್ದರು. ಮಹಡಿಗೆ ಹತ್ತುವುದಕ್ಕೆ ಬೊಂಬಿನ ಏಣಿಯನ್ನು ಹಾಕಿದ್ದರು. ಅವರಲ್ಲಿ ಕೆಲಸಕ್ಕೆ ಸೇರಿಕೊಂಡು ಏಣಿಯನ್ನು ಹತ್ತಹೋಗಿ, ಆವರು ಕೂಗಿದ ನೆಪವನ್ನು ಕಾದು ಕೊಂಡಿದ್ದು, ಅಲ್ಲಿಂದ ಕೆಳಗೆ ಬಿದ್ದಂತೆ ನಟಿಸಿ ಅವರಿಂದ ಹೆಚ್ಚು ದಂಡವನ್ನು ತೆರಿಸ ಬೇಕೆಂದು ಸ್ಥಿರಮಾಡಿಕೊಂಡೆವು. ಅಂತೆಯೇ ಆ ಮನೆಯ ಕಟ್ಟುವಿಕೆಗೆ ಕೆಲಸಗಾರ ನಾಗಿ ಸೇರಿಕೊಂಡೆ. ಅವರು ಅಲ್ಲಿಗೆ ದಿನಾಲೂ ಬೆಳಿಗ್ಗೆ ಬಂದು ಕೆಲಸವನ್ನು ನೋಡಿ ಕೊಳ್ಳುತ್ತಿದ್ದರು. ಒಂದು ದಿನ ನನ್ನನ್ನು ಕರೆದು, 'ಮಹಡಿಯ ಮೇಲಕ್ಕೆ ಹತ್ತಿ, ಅಲ್ಲಿಂದ ಈ ಹಗ್ಗವನ್ನು ಕೆಳಕ್ಕೆ ಬಿಡು, ಅದು ನೇರವಾಗಿ ಬೀಳುವ ಕಡೆಯಲ್ಲೇ ಒಂದು ಸಿಂಹದ ಬಾಯಿಯನ್ನು ಮಾಡಿಸಿ ಮಳೆಯ ನೀರು ಅದರ ಬಾಯಿಯಲ್ಲಿ ಬೀಳುವಂತೆ ಮಾಡಬೇಕು, ಎಂದರು. ನಾನು ಹೇಳಿದೆ, 'ಏಣಿಯು ಚೆನ್ನಾಗಿಲ್ಲ. ಬೇರೆ ಏಣಿ ತರಿಸಿ, ನಂತರ ಹತ್ತುತ್ತೇನೆ, ಎಂದು. ಅವರಂದರು, 'ಈ ಏಣಿ ಸರಿಯಾಗಿದೆ. ನೆನ್ನೆಯ ದಿನವೆಲ್ಲಾ ಇದನ್ನು ಕೆಲಸಗಾರರು ಉಪಯೋಗಿಸಿದ್ದಾರೆ' 'ಸರಿ' ಎಂದು ಹೇಳಿ ಅದರ ಕಾಲಿಗೆ ಉರೆಕೊಟ್ಟಿದ್ದ ಕಲ್ಲನ್ನು ಅವರಿಗೆ ಕಾಣದಂತೆ ಯೇ ಕಾಲಿನಿಂದ ಒದೆದು ಹತ್ತಲಾರಂಭಿಸಿದೆ. ತುದಿಗೆ ಹೋಗುವ ವೇಳೆಗೆ ಗೋಡೆಗೆ ಕೈಕೊಟ್ಟು ನೂಕಿ ಏಣಿಯು ಬೀಳುವಂತೆ ಮಾಡಿ, ನಾನು ಅಲ್ಲಿಂದ ನೆಗೆದು, ಬಿದ್ದು ಜ್ಞಾನ ತಪ್ಪಿದವನಂತೆ ಅಥವಾ ಕಾಲು ಮುರಿದವನಂತೆ ನಟಿಸಬೇಕೆಂದು ನನ್ನ ಕಾರ್ಯಕ್ರಮ. ಹಾಗೆಯೇ ಪ್ರಯತ್ನಿಸಿದೆ, ಆದರೆ ನೋಡಿ, ನನಗೆ ಈಗ ಕಲಾ ದೇವಿಯು ಪ್ರಸನ್ನಳಾಗಿಲ್ಲ. ವಯಸ್ಸಾಗಿ ಹೋಯಿತು. ಇನ್ನೂ ನನ್ನ ಆಟ ಹೂಡಲು ಐದು ಮೆಟ್ಟಲುಗಳಿದ್ದಾಗಲೇ ಏಣಿಯು ಅದೇ ಅದಾಗಿ ಜಾರಿತು.

ನಾನು ಕೆಳಗೆ ಬಿದ್ದೆ. ಕಾಲು ದಿಟವಾಗಿಯೂ ಮುರಿದುಹೋಯಿತು. ಆಸ್ಪತ್ರೆಗೆ ತಕ್ಷಣ ಸಾಹುಕಾರರು ತಮ್ಮ ಕಾರಿನಲ್ಲಿಯೇ ಕರೆದುಕೊಂಡು ಹೋದರು. ಅಲ್ಲಿ ಮೂರು ತಿಂಗಳಿದ್ದು ಹಿಂತಿರುಗಿ ಬಂದೆ. ನನ್ನ ಜತೆಗಾರನು ಹೇಳಿದ, 'ಈಗ ಸಾವಿರ ರೂಪಾಯಿ ದಂಡ ಗಿಟ್ಟಿಸಿಬಿಡೋಣ, ಎಂದು. ಸಾಹುಕಾರರು ನಾನು ಗಲಾಟೆ ಎಬ್ಬಿಸದೆ ಇದ್ದರೆ, ಅವರ ಮನೆಯ ಹೆಂಗಸರಿಗೆ ಇದು ಗೊತ್ತಾಗದೆ ಇದ್ದರೆ, ಸಾವಿರ ರೂಪಾಯಿ ಕೊಡುವುದಾಗಿ ಒಪ್ಪಿಕೊಂಡರು, ನಾನು ಅದನ್ನು ತೆಗೆದುಕೊಳ್ಳಲಿಲ್ಲ, ಎಂದು ಹೇಳಿದ.

'ಅದೇಕೆ ಹಣ ತೆಗೆದುಕೊಳ್ಳಲಿಲ್ಲ ? ಅದೇ ನಿನ್ನ ಕಾರ್ಯವಾಗಿತ್ತಲ್ಲ ? ಆ ಹಣ ಇಟ್ಟುಕೊಂಡು ಒಂದು ದೊಡ್ಡ ಅಂಗಡಿಯನ್ನೇ ಆರಂಭಿಸಬಹುದಾಗಿತ್ತಲ್ಲ ? ಎಂದೆ.

'ಛೇ, ನಾನೇ ಬೇಕಾಗಿ ಬಿದ್ದು, ನನ್ನ ಕಲೆಯನ್ನು ಪ್ರೌಢ ರೀತಿಯಲ್ಲಿ ನಡೆಸಿದ್ದರೆ ಆ ಹಣವನ್ನು ತೆಗೆದುಕೊಳ್ಳಲು ನನಗೆ ಹಕ್ಕುಂಟು. ನಾನು ಆಕಸ್ಮಾತ್ತಾಗಿ ಬಿದ್ದೆ. ನನ್ನ ಕ್ರಮದಂತೆ ಬೀಳಲಿಲ್ಲ, ಈ ಅಪಾಯವಾದ ಮಾತ್ರಕ್ಕೇ ಹಣವನ್ನು ನಾನು ತೆಗೆದುಕೊಳ್ಳಬಹುದೇ ? ನಾನು ಸಂಪಾದಿಸಿದ್ದರೆ ಸಂತೋಷವಾಗಿ ತೆಗೆದುಕೊಳ್ಳುತ್ತಿದ್ದೆ. ಇದು ನನಗೆ ಅನ್ಯಾಯದ ಹಣ. ಅದಕ್ಕಾಗಿ ತೆಗೆದುಕೊಳ್ಳಲಿಲ್ಲ, ಎಂದ.

ಅವನ ಹತ್ತಿರ ಇನ್ನರಡು ಕುಚ್ಚು ಹೂವು ತೆಗೆದುಕೊಂಡೆ. ನಾನು ಒಬ್ಬನೇ ಇದ್ದವನು, ನನಗೆ ಹೂವು ಬೇಡವಾಗಿತ್ತಾದರೂ ಆ ವ್ಯಾಪಾರ ಮಾಡಿದೆ. ಅದೇ ನಾನು ಅವನ ಸತ್ಯವಾದ ಕಲೆಗೆ ಕೊಟ್ಟ ಕಾಣಿಕೆ. ಬೇರೊಂದನ್ನೂ ಅವನು ತೆಗೆದುಕೊಳ್ಳನು.

ಯಜ್ಞದೀಕ್ಷಿತರಲ್ಲಿ ನಾವಿಂದು ಮುಂದು

—ಡಾ. ಪರಡ್ಡಿ ಮಲ್ಲಿಕಾರ್ಜುನ, ಧಾರವಾಡ

ಯಾವುದಾದರೂ ಕಠಿಣಕಾರ್ಯ ಮಾಡಿ ಮುಗಿಸಿದಾಗ (ಮುಗಿಸದೇ ಇದಾ ಗಿನ ಗತಿ ಭಗವಂತನಿಗೇ ಗೊತ್ತು) ಯಜ್ಞಮಾಡಿದಷ್ಟೇ ಶ್ರಮವುಂಟಾಗುವದೆಂಬ ಅನುಭವ ಯಜ್ಞಶಾಲೆಯಾದ ಸಬ್ ರಜಿಸ್ಟ್ರಾರ್ ಅವರ ಕಚೇರಿಯಲ್ಲಿ ನನಗಾಯ್ತು (ಯಾವುದೇ ಒಂದು ರಜಿಸ್ಟ್ರೇಶನ್ ಸಲುವಾಗಿ ಹೋಗಿದ್ದೆನೆಂಬುದು ಸ್ವಯಂವೇದ್ಯ. ಇಲ್ಲದಿದ್ದರೆ ಎಲ್ಲಮ್ಮನ ಗುಡ್ಡದಲ್ಲಿ ಮುಲಾನಿಗೇನು ಕೆಲಸ ?)

ಯಜ್ಞದ ಸರಿಯಾದ ಫಲ ದೊರೆಯುಬೇಕಾದರೆ ಅನಂಭವಿಯೂ, ಪೂರ್ಣ ಪ್ರಜ್ಞನೂ ಆದ ಪುರೋಹಿತ ದೊರೆಯುಬೇಕು (ಈಗ ಪುರೋಹಿತಗಾವ ಕಿಮ್ಮತ್ತೂ ಇಲ್ಲವೆಂದು ನಿಮ್ಮ ಅನಿಸಿಕೆಯಲ್ಲವೆ ? ಆದರೆ ಅವರ ಸಂಖ್ಯೆ ವಿಪರೀತ ಬೆಳದಿದೆ. ವೇಷ–ಭೂಷಣ ಬದಲಾಯಿಸಿಕೊಂಡಿದ್ದಾರೆ ಅಷ್ಟೇ!) ಆದರೆ ಅವನ ಪ್ರಾಪ್ತಿ ಪುಣ್ಯವಿಶೇಷದಿಂದಲೇ (ಪುಣ್ಯ ಅರ್ಥ, ಹಣ) ಸಾಧ್ಯವೆಂದರೆ ಉತ್ಪ್ರೇಕ್ಷೆಯಾಗ ಲಾರದು. ಎಲ್ಲ ದೇವತೆಗಳ ಪೂರ್ಣ ಪರಿಚಯ ಅಂದರೆ ಅವರ ದೌರ್ಬಲ್ಯಗಳ ಪರಿಚಯವಿಲ್ಲದ ಪುರೋಹಿತ ಮಾಡಿದ ಯಜ್ಞ ಸಫಲವಾಗದೆಂಬುದನ್ನು ಪುರಾಣೇತಿ ಹಾಸಗಳಲ್ಲಿ ನಾವು ಓದುವದಿಲ್ಲವೆ ? ಸಶರೀರನಾಗಿಯೇ ಸ್ವರ್ಗಕ್ಕೆ ಪ್ರಯಾಣ ಬೆಳೆಸಬೇಕೆಂದು ಅಂದರೆ ಹುಟ್ಟಾಸತ್ತಿಲ್ಲ, ಸ್ವರ್ಗ ಕಂಡಿಲ್ಲವೆಂಬ ಗಾದೆಯನ್ನು ಸುಳ್ಳಾಗಿಸಲು ಬಯಸಿದ ತ್ರಿಶಂಕು ಮಹಾರಾಜ ಪುರೋಹಿತನ ಅನ್ವೇಷಣೆಯಲ್ಲಿ ಪಟ್ಟ ಪರಿಶ್ರಮ ಅವರ್ಣನೀಯ. ಅವನ ಪಾಡು ನಮ್ಮ ವೈರಿಗೂ ಬೇಡ. ಆ ಕಾಲದ ಶ್ರೇಷ್ಠ ಪುರೋಹಿತರೆಂದು ಪ್ರಸಿದ್ಧಿ ಪಡೆದ (ಆ ಪ್ರಸಿದ್ಧಿ ಪಡೆಯಲು ಅವರ ಯಾವ ಯಾವ ಮಾರ್ಗಗಳನ್ನು ಬಳಸಿದರೆಂಬುದು ಚಿದಂಬರ ರಹಸ್ಯ.) ವಶಿಷ್ಟ ರನ್ನು ಕನ್‌ಸಲ್ಟ್ ಮಾಡಿದಾಗ ಅವರು ತಮ್ಮ ಅಶಕ್ತಿಯನ್ನು ಒಪ್ಪಿಕೊಳ್ಳದೇ ಅವನನ್ನೇ ನಿಂದಿಸಿ ಕಳಿಸಿದರಂತೆ. ಲಬ್ಧಾಸ್ಪದೋ ಸ್ಮೀತಿ ವಿವಾದಭೀರೋ ! (ಅಧಿಕಾರ ದೊರೆತಾಗ ವಿವಾದಕ್ಕಿಳಿದು ಅಂದರೆ ಸತ್ವಪರೀಕ್ಷೆಗೆ ತಯಾರಾಗಿ ತಮ್ಮ ಅಧಿಕಾರವನ್ನು ಕಳೆದುಕೊಳ್ಳುವದು ಮೂರ್ಖತನವೆಂದು ಪಾಕಿಸ್ತಾನ ಮತ್ತು ಬಂಗ್ಲಾದೇಶದ ಅಧ್ಯಕ್ಷರಿಗೆ ಯಾರೂ ಹೇಳಿಕೊಡಬೇಕಾಗಿಲ್ಲ.) ಎಂಬ ಕಾಳಿದಾಸನ ನುಡಿ ವ್ಯವಹಾರಯೋಗ್ಯವಾದುದಲ್ಲ.

ಆ ಅವಹೇಳನಕ್ಕೆ ಧೃತಿಗೆಡದೇ ಹಿಡಿದ ಪಟ್ಟನ್ನು ಬಿಡದೇ ತ್ರಿಶಂಕು ಅಂಥ ವ್ಯವಹಾರದಲ್ಲಿ ಪಳಗಿದವನೆಂದು ವಿಶ್ವಾಮಿತ್ರನನ್ನು ವಿನಂತಿಸಲಾಗಿ ಅವನದಕ್ಕೊಪ್ಪಿ ಎಷ್ಟೇ ದಕ್ಷತೆ ಮತ್ತು ಪರಿಶ್ರಮ ವಹಿಸಿ ಯಜ್ಞ ಮಾಡಿದರೂ ತ್ರಿಶಂಕುವಿನ ಆಸೆ ಪೂರೈಸಲಿಲ್ಲ. (ಪ್ರತಿಗಾಮಿಗಳ ಕೈ ಗೊಂಬೆಯಾದ ಪುರೋಗಾಮಿಗಳ ಪ್ರಯತ್ನಕ್ಕೆ ಪ್ರತಿಕೂಲವೆಂದು ನವ್ಯ ದಲಿತ ಸಾಹಿತಿಗಳು ಅಭಿಪ್ರಾಯಪಟ್ಟರೆ ಅದು ಸಮಂಜಸ ವಲ್ಲವೇ ?) ಇದರಿಂದ ವಿಶ್ವಾಮಿತ್ರನ ಯಜ್ಞ ಸಂಬಂಧಿಯಾದ ಜ್ಞಾನ, ಅಪೂರ್ಣ ವೆಂದು ತಿಳಿಯಬಹುದೇ ? 'ಇತೋಭ್ರಷ್ಟಸ್ತತೋ ಭ್ರಷ್ಟ ನಾದವನ ಸ್ಥಿತಿ ಯನ್ನು ತ್ರಿಶಂಕುಸ್ವರ್ಗಕ್ಕೆ ಹೋಲಿಸುವದರ ಔಚಿತ್ಯ ಈಗಲಾದರೂ ಅರ್ಥ ವಾಯ್ತೆಂದು ಭಾವಿಸುತ್ತೇನೆ. (ಎಷ್ಟೋ ಸಲ ಕೆಲ ನುಡಿಗಳನ್ನು ಅವುಗಳ ಅರ್ಥ ತಿಳಿಯದೇ ನಾವು ಬಳಸುತ್ತೇವೆ.) ಇದೇ ಕಾರಣಕ್ಕಿರಬೇಕು—ಅನರ್ಥಕಾ ಹಿ ಮಂತ್ರಾ ಎಂದರೆ ವೇದ ಮಂತ್ರಗಳಿಗೆ ಅರ್ಥವಿಲ್ಲವೆಂದು ಸಾವಿರಾರು ವರ್ಷಗಳ ಹಿಂದೆಯೇ ಭಾವಿಸಲಾಗಿತ್ತೆಂಬುದನ್ನು ಯಾಸ್ಕಮುನಿ ತನ್ನ ನಿರುಕ್ತದಲ್ಲಿ ನಿರೂಪಿಸಿ ದ್ದಾನೆ.

ಆಮೇಲೆ ಒಪ್ಪಿದ ತಪ್ಪಿಗಾಗಿ ಅಥವಾ ಕರಾರು ಮುರಿದ ತಪ್ಪಿಗಾಗಿ (for breach of contract, ಏಕೆಂದರೆ ಅನುಭವ ಕಾರ್ಯ ಮಾಡುವ ಕರಾರಿಗೆ ಅಸಿಂಧು ಎಂದು ಒಪ್ಪಿದರೂ, ಅಂಥ ಘನಮಹಿಮ ಮಹರ್ಷಿಗಳಿಗೆ ಅದು ಅಸಂಭವ ವಲ್ಲವೆಂದು ಆಸ್ತಿಕ ಭಾವನೆ ತ್ರಿಶಂಕುವಿನಲ್ಲಿತ್ತು.) ಪರಿಹಾರ ಅಥವಾ ನಷ್ಟಪೂರ್ತಿ ಗಾಗಿ ಬೇರೊಂದು ಸ್ವರ್ಗವನ್ನು ಸೃಷ್ಟಿಸಿ ತನ್ನ ಹೆಸರಿನಲ್ಲಿ (ವಿಶ್ವಾಮಿತ್ರ ಸೃಷ್ಟಿ) ಉಳಿಯುವಂತೆ ಮಾಡಿದ್ದು ಇಲ್ಲಿ ಅಪ್ರಸ್ತುತ (Disney land—ಇದರ ಮುಂದೆ ನೀವಾಳಿಸಿ ಒಗೆಯಬೇಕಲ್ಲವೇ ?)

ನನ್ನ ಪುಣ್ಯವಶಾತ್ ಪಳಗಿದ ಹಳೆ ಹುಲಿಯೇ ನನಗೆ ದೊರೆತು, ಅವನು ಎಲ್ಲಾ ಏರ್ಪಾಡು ಮಾಡುವ ಹೊಣೆ ಹೊತ್ತುಕೊಳ್ಳಲಾಗಿ, ಪೌರೋಹಿತ್ಯದ ಖರ್ಚು (ದಕ್ಷಿಣೆ) ಮತ್ತು ಇತರ ಅವಶ್ಯಕ ಸಾಮಾನುಗಳನ್ನು ಮಾತ್ರ ಒದಗಿಸುವ ಜವಾಬ್ದಾರಿ ನನಗೆ ಉಳಿಯಿತು. ಆದರೂ ದಿಗ್ವಿಜಯವನ್ನು ಮಾಡಿ ಅಪಾರ ಸಂಪತ್ತನ್ನು ಗಳಿಸಿ ದಾಗಲೂ ಉಂಟಾಗದ ಶ್ರಮ ವಿಶ್ವಜಿದ್ಯಾಗ ಮಾಡಿ ಮುಗಿಸಿದಾಗ ರಘು ಮಹಾ ರಾಜನಿಗೆ ಉಂಟಾಯ್ತೆಂಬುದನ್ನು ಕಾಳಿದಾಸ ತಮ್ಮ ರಘುವಂಶದ ರಘು ದಿಗ್ವಿಜಯ ಪ್ರಸಂಗದಲ್ಲಿ ವಿವರಿಸಿದ್ದಾನೆ. ಕೈಯಲ್ಲಿ ಮಣ್ಣಿನ ಪಾತ್ರೆಯನ್ನು ಹಿಡಿದು ನಿಂತ ರಘುಮಹಾರಾಜನ ಅ ನು ಭ ವ ದ ಲ್ಲಿ ಕೊಂಚ ಭಾಗವಾದರೂ ನನ್ನದಾಯ್ತೆಂದು ಹೇಳಿದರೆ ಸತ ಕ್ಕೆ ತೀರ ಸಮೀಪದ ಮಾತು.

ಈ ಮೊದಲೇ ಸೂಚಿಸಿದಂತೆ ಪುರೋಹಿತನಿಗೆ ಮಾತ್ರ "ಯಾವದೇವತೆಗೆ ಎಷ್ಟು ಭಾಗ ಸಲ್ಲಬೇಕೆಂಬ ವಿಷಯ ಸರಿಯಾಗಿ ತಿಳಿದಿರುತ್ತದೆ. 'ಇಂದ್ರಾಯಸ್ವಾಹಾ ವರುಣಾಯ ಸ್ವಾಹಾ' ಎಂದು ಘೋಷಿಸಿ ಅವರವರ ಪಾಲನ್ನು ಅವರಿಗೆ (ಪರಿಹಾರ ಕಾರ್ಯಕ್ರಮದನ್ವಯ ನಮ್ಮ ದಕ್ಷ ಅಧಿಕಾರಿಗಳು ಇವನಿಗೆ ಇಷ್ಟು ಎಂದು ಪೇಪರಿನಲ್ಲಿ ನಮೂದಿಸಿ ಅದರ ಕೆಲ ಭಾಗವನ್ನಷ್ಟು ಅವನಿಗೆ ಕೊಡುವಂತೆ ಪುರೋಹಿತರೂ ಮಾಡುತ್ತಿದ್ದರೆಂಬುದಕ್ಕೆ ಆಧಾರವಿಲ್ಲ.) ಮುಟ್ಟಿಸುವಲಿ ದಕ್ಷನಾಗಿರುತ್ತಾನೆ. ಪುರೋಹಿತ ಪಳಗಿದ್ದರಂತೂ, ಅವನು ಬಾಯಿ ಬಿಟ್ಟು ಏನನ್ನೂ ನುಡಿಯದಿದ್ದರೂ ಸಹ ಲಕ್ಷಣಾಮೂಲಕವಾಗಿ ಅವರವರ ಪಾಲು ಅವರಿಗೆ ತಪ್ಪಿಲ್ಲದೆ ಸಂದಾಯವಾಗುತ್ತದೆ. ಫಲ ಸಿದ್ಧಿಯಾಗಬೇಕಾದರೆ ಇಂತಿಷ್ಟು ಭಾಗ ಅವರಿಗೆ ಮುಟ್ಟಲೇ ಬೇಕು.

ದೇವತೆಗಳ ಬಳಿ ಡೈರೆಕ್ಟ್ ಹೋಗಿ ಅವರ ಪಾಲನ್ನು ಸಂದಾಯ ಮಾಡದಿದ್ದರೂ ಅಗ್ನಿಯ ಏಜೆನ್ಸಿ (ಪ್ರಾತಿನಿಧ್ಯ)ಯ ಉಪಯೋಗವನ್ನು ಅವನು ಚೆನ್ನಾಗಿ ತಿಳಿದಿರುತ್ತಾನೆ. ಅತಿದಕ್ಷವಾಗಿರುವ ನಮ್ಮ ಇಂದಿನ ಪೋಸ್ಟಲ್ ವ್ಯವಸ್ಥೆಯು ಕೈಚಳಕದಿಂದ ಅಡ್ರೆಸ್ ತಿಳಿಯದ (ತಿಳಿಯುವ ಶ್ರಮ ಪಡೆವುದರಲ್ಲಿ ಯಾವ ಪುರುಷಾರ್ಥವಿದೇ ?) ಎಷ್ಟೋ ಕಾಗದಗಳು ನಮ್ಮ ವಿಭಾಗಕ್ಕೆ ಬಂದಿರುವ ಪವಾಡಗಳುಂಟು. ಆದರೆ ದೇವತೆಗಳ ಏಜೆಂಟನಾದ ಅಗ್ನಿಯು ಮಾತ್ರ ಅವರವರ ಪಾಲನ್ನು ಅವರವರಿಗೇ ಮುಟ್ಟಿಸುವಲ್ಲಿ ದಕ್ಷನಾಗಿದ್ದನೆಂಬುದನ್ನು ನಾವು ಮರಯಕೂಡದು. 'ಅಗ್ನಿಮುಖಾ ವೈ ದೇವಾ' ಎಂಬ ನುಡಿಯಂತೆ ದೇವತೆಗಳು ತಮ್ಮ ಪಾಲಿನದನ್ನು ತಾವೇ ಕೈಯಾರೆ ಸ್ವೀಕರಿಸಲು ಹೆದರಿ ಅಗ್ನಿಯ ಮುಖಾಂತರ ಸ್ವೀಕರಿಸುತ್ತಾರೆ. ಅಂದರೆ ಅವರಿಗೂ ವಿಜಿಲೆನ್ಸ್ ಕಮಿಷನರ್ (Vigilance Commissioner) ಅವರ ಜಾಲಕ್ಕೆ ಬೀಳುವ ಭಯವಿದ್ದೇ ಇದೆ ಎಂದು ತಿಳಿಯುತ್ತದೆ.

ಪ್ರತಿನಿಧಿ (ಎಜೆಂಟ್) ದಕ್ಷನಾಗದೆ, ಪ್ರಸನ್ನನಾಗದೆ, ದೇವತೆಗಳಿಗೆ ಅವರ ನಿರ್ದಿಷ್ಟವಾದ ಭಾಗ ಮುಟ್ಟುವದಿಲ್ಲ, ಯಜಮಾನನ ಕಾರ್ಯ ಸಫಲವಾಗುವುದಿಲ್ಲ. ಅವರ ಈ ದೌರ್ಬಲ್ಯವನ್ನರಿತೇ ಅಗ್ನಿ ತಾನೂ ದೇವತೆಗಳ ಸಾಲಿನಲ್ಲಿ ಕೂಡುವ ಹಟದಲ್ಲಿ ಗೆದ್ದಂತೆ ತೋರುತ್ತದೆ. ಅಷ್ಟೇ ಅಲ್ಲ, ದೇವಾದಿದೇವನೂ ಆಗಿದ್ದಾನೆ. ಅಗ್ನಿಯ ಅನೇಕ ಕಾರ್ಯಗಳಲ್ಲಿ ಹವಿಸ್ಸು ಕೊಂಡೊಯ್ದು ಅವರಿವರಿಗೆ ಮುಟ್ಟಿಸುವದು ಒಂದಾಗಿರುವಂತೆ ಯಾವುದೋ ಒಂದು ಆಫೀಸಿನಲ್ಲಿ ಎಷ್ಟು ಸಣ್ಣ ಕೆಲಸದಲ್ಲಿ ನಿಯುಕ್ತನಾಗಿದ್ದರೂ ಒಬ್ಬ ವ್ಯಕ್ತಿ ಪ್ರಭಾವಶಾಲಿಯಾಗಿರುವದನ್ನು ಕಾಣುತ್ತೇನೆ. ಅಂದರೆ

ಆಫೀಸಿನ ಜವಾನನ ಅನುಗ್ರಹ (ಅದಕ್ಕೆ ದಕ್ಷಿಣೆ ಅನಿವಾರ್ಯ) ವಿಲ್ಲದೆ ಆಫೀಸರ್ ಅವರ ದರ್ಶನ ಭಾಗ್ಯದೊರೆಯದು.

ಅಗ್ನಿದೇವನು ಇಂದ್ರಾದಿದೇವತೆಗಳನ್ನು ಗುರುತಿಸುವದಷ್ಟೇ ಅಲ್ಲ, ಅವರ ಹೊರ ಒಳಗನ್ನು ಸರಿಯಾಗಿ ಬಲ್ಲ. ಏನೇ ಇದ್ದರೂ ಅವರವರೊಡವೆಯನ್ನು ಅವರವರಿಗೆ ಸಲ್ಲಿಸುವ (ಅದರ ಕಮಿಷನ್ ಮೊದಲೇ ಯಜಮಾನನಿಂದ ಪಡೆಯುವ ವಿಷಯ ಬೇರೆ) ನೈತಿಕ ಹೊಣೆಗಾರಿಕೆಯನ್ನು ಅವನು ಎಂದೂ ಮರೆಯುವುದಿಲ್ಲ. ಈ ಗುರುತರವಾದ ಹೊಣೆಗಾರಿಕೆಗೆ ಎಷ್ಟು ಬೆಲೆ ಕೊಟ್ಟರೂ ಕಡಿಮೆಯೇ.

ಈ ರೀತಿ ಕಲಿಯುಗ ದ್ವಾಪರವಾಗುವದಷ್ಟೇ ಅಲ್ಲ (ಕುಮಾರವ್ಯಾಸ ಭಾರತ ದಿಂದಾಗುವ ಪ್ರಯೋಜನವಿದು) ಕೃತಯುಗವಾಗುವದನ್ನು ನಾವು ಕಾಣುವ ಭಾಗ್ಯ ಶಾಲಿಗಳಾಗಿದ್ದೇವೆ. ಗತವೈಭವವೆಂದು ಕರೆಯಬಹುದಾದ ಯಜ್ಞಕಾರ್ಯದ ಸಾಕ್ಷಾತ್ಕಾರವನ್ನು ಕಾಣಬೇಕಾದರೆ ಬೇರೆಲ್ಲಿಯೂ ಹೋಗಬೇಕಿಲ್ಲವೆಂಬ ವಿಷಯ ಈ ವೇಳೆಗಾದರೂ ನಿಮ್ಮೆಲ್ಲರಿಗೆ ಮನದಟ್ಟಾಗಿರಬಹುದು. ನಮ್ಮ ಹಿಂದಿನ ಘನ ಸಂಸ್ಕೃತಿಯನ್ನು ಮುಂದುವರಿಸುವಷ್ಟೇ ಅದರ ಉಜ್ವಲೀಕರಣಕ್ಕಾಗಿ ಕಂಕಣಬದ್ಧ ವಾದ ಇಂಥ ಯಜ್ಞಶಾಲೆಗಳಲ್ಲಿಯ ಕಾರ್ಯ ನಿರ್ವಿಘ್ನವಾಗಿ ಸಾಗುವ ವ್ಯವಸ್ಥೆ ಸರಕಾರ ಮಾಡಿರುವಂತೆ ತೋರುತ್ತದೆ. ಶಾಕುಂತಲದಲ್ಲಿ ಕಣ್ವ ಶಿಷ್ಯರು ನೀನು ಪ್ರಜಾಪಾಲನೆ ಮಾಡುತ್ತಿರಲು ಅಂದರೆ ರಾಜ್ಯವಾಳುತ್ತಿರಲು ಧಾರ್ಮಿಕ ಕ್ರಿಯೆಗಳಿಗೆ ವಿಘ್ನವು ಉಂಟಾಗುವದಾದರೂ ಹೇಗೆ? ಸೂರ್ಯನು ಪ್ರಜ್ವಲಿಸುತ್ತಿರಲು ಕತ್ತಲು ಅವಿರ್ಭವಿಸುವದು ಸಾಧ್ಯವೇ?" ಎಂದು ದುಷ್ಯಂತನಿಗೆ ಹೇಳಿದ ಮಾತ ನ್ನಿಲ್ಲಿ ನಾವು ಸ್ಮರಿಸಬೇಕು.

Oh! For a Pale ಲಿಪ್‌ಸ್ಟಿಕ್

—ನಂದಕಿಶೋರ

ನನ್ನ ಪ್ರೇಮದ ಹುಡುಗಿ
ಮುಗ್ಧ ಹಳ್ಳಿಯ ತರುಣಿ
ಊರು ತಿಮ್ಸಂದ್ರ

ಬಣ್ಣ ಹಾಲಿನ ಬಿಳುಪು
ಹುಲ್ಲೆಯಾ ಕರಿ ಕಣ್ಣು
ತುಟಿಯೋ ರಣ ಕೆಂಪು

ತಿಮ್ಸಂದ್ರ ದೂರಿನಲಿ
ಇರುವ ಶೆಟ್ರಂಗ್ಡಿಯಲಿ
ಇರುವುದೊಂದೇ ತುಟಿಯ ರಂಗು

ಕಾಯುತಿರುವೆನು ನಾನು
ಸಿಗುವುದೆಂದಿಗೋ ತಿಳಿಯೆ
ಸ್ವಲ್ಪ ..... ಸ್ವಲ್ಪ ತೆಳು ರಂಗು !

***



No. 23 AL 84-NT III

—: ಶುಭಾಶಯಗಳೊಂದಿಗೆ :—

ದಿ ಸಂಡೂರ್ ಮ್ಯಾಂಗನೀಸ್ ಅಂಡ್ ಐರನ್ ಓರ್ಸ್ ಲಿಮಿಟೆಡ್

ರಿಜಿಸ್ಟರ್ಡ್ ಮತ್ತು ಕಾರ್ಯ ನಿರ್ವಾಹಕ ಕಛೇರಿ ;

"ಲೋಹಾದ್ರಿ ಭವನ"

ಯಶವಂತ ನಗರ್–583 124 ಸಂದೂರ್ ಮಾರ್ಗ (ಬಳ್ಳಾರಿ ಡಿಸ್ಟ್ರಿಕ್ಟ್)

ಕರ್ನಾಟಕ